

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

RNI REG No. : KARKAN/2016/75068

Volume : 07 Issue : 67 Saturday 16-11-2024 E-mail : maruti.b.hosamani76@gmail.com Page: 4 Price : Rs. 1/-


## ವಿಕ್ರಮ್ ಕುಮತಾರ ಕಿರು ಚಿತ್ರಗಳ ಸರಣಿ ಆರಂಭ



**ಸಿಹಿ ಕಹಿ ಸುದ್ದಿ**

**ಹುಬ್ಬಳ್ಳಿ :** ಕಿರು ಚಿತ್ರಗಳ ಮೂಲಕ ಸದಾಕಾಲ ಹೊಸತನ್ನು ಕೊಡುವ ತುಡಿತವಿರುವ ಮೂಲತ: ಗದಗ-ಬೆಟಗೇರಿಯವರಾದ ವಿಕ್ರಮ್ ಕುಮತಾ ಇದೀಗ ಕಿರುಚಿತ್ರಗಳ ಸರಣಿ ಆರಂಭಿಸಿದ್ದಾರೆ. ಎಸ್ ಬಿಟ್ಸ್ ಹುಬ್ಬಿ ಚಾನೆಲ್ ಮೂಲಕ ಒಂದೊಂದು ಹೊಸ ವಿಷಯಗಳ ಮೂಲಕ ಜನರಲ್ಲಿ ಸಾಮಾಜಿಕ ಕಳಕಳಿಯ ಜೊತೆಗೆ, ಹಾಸ್ಯ ಪ್ರಜ್ಞೆಯನ್ನು ಬಿಂಬಿಸುವ, ಜನ ಜಾಗೃತಿಯನ್ನು ಒಳಗೊಂಡಂತೆ ಪ್ರಸ್ತುತ ವಿಷಯಗಳನ್ನು ವೀಕ್ಷಕರಿಗೆ ತಿಳಿಸಿ ಕೊಡುವಲ್ಲಿ ತಮ್ಮದೇ ತಂಡದ ಮೂಲಕ ಯಶಸ್ವಿ ಯಾಗಿದ್ದಾರೆ. ಈ ಕಿರುಚಿತ್ರಗಳ ಸರಣಿಗಳಲ್ಲಿ ಪ್ರತಿಭಾನ್ವಿತ ಯುವ ಕಲಾವಿದರಿಗೆ ವೇದಿಕೆ ನೀಡಲಾಗಿದ್ದು. ಹುಬ್ಬಳ್ಳಿ-ಧಾರವಾಡಗಳಲ್ಲಿ ಮತ್ತು ಸುತ್ತಮುತ್ತ ಗ್ರಾಮೀಣ ಭಾಗಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ. ಕಲಾವಿದರಾಗಿ ವಿಕ್ರಮ್ ಕುಮತಾ, ಭಾವನಾ ಶಿಂಧೆ, ರೇಖಾ ಹೊನವಾಡ, ಟಿ.ಜೆ.ಭಾಂಡಗೆ, ಸಂತೋಷ ಜಾಧವ, ಕಿರಣ ಸಿದ್ದಾಪೂರ, ವೀರನಗೌಡ ಸಿದ್ದಾಪೂರ, ಪೂಜಾ ಪಾಟೀಲ, ವೀಣಾ ಮಠ, ಲಲಿತಾ ಬೆಟಗೇರಿ, ಕೆ.ಪಿ.ಶೇಖರ, ಮಹಾಂತೇಶ ಹಿರೇಮಠ, ರಮೇಶ ಕಲಾದಗಿ, ಪ್ರೀತಮ್ ಶಿಂಧೆ, ಶುಷ್ಮಾ ಕರಾಲೆ, ಅನ್ನಪೂರ್ಣ ಯಾದವಾಡ, ನಿಖಿಲ್ ಗೊಂಧಳೆ, ರಮೇಶ ಜಾಧವ ಮೊದಲಾದವರು ಅಭಿನಯಿಸಿದ್ದಾರೆ. ತಾಂತ್ರಿಕ ವರ್ಗದಲ್ಲಿ ಕಥೆ- ಚಿತ್ರಕಥೆ ವಿಕ್ರಮ್ ಕುಮತಾ, ಭಾವನಾ ಶಿಂಧೆ, ರೇಖಾ ಹೊನವಾಡ, ಪಿಆರ್ ಓ ಡಾ, ಪ್ರಭು ಗಂಜಿಹಾಳ, ಡಾ, ವೀರೇಶ ಹಂಡಿಗಿ, ಸಹ ನಿರ್ದೇಶನ ಭಾವನಾ ಶಿಂಧೆ, ಸಂಕಲನ ಮತ್ತು ಛಾಯಾಗ್ರಹಣ ನಿರ್ದೇಶನದ ಹೊಣೆಯನ್ನು ವಿಕ್ರಮ್ ಕುಮತಾ ಹೊತ್ತಿದ್ದಾರೆ. ಕಿರು ಚಿತ್ರಗಳನ್ನು ಎಸ್ ಬಿಟ್ಸ್ ಹುಬ್ಬಿ ಯುಟ್ಯೂಬ್ ಚಾನೆಲ್ ನಲ್ಲಿ ವೀಕ್ಷಿಸಿ ಪ್ರೋತ್ಸಾಹಿಸುವಂತೆ ನಿರ್ದೇಶಕ ವಿಕ್ರಮ್ ಕುಮತಾ ಕೋರಿದ್ದಾರೆ.

**ವರದಿ: ಡಾ.ಪ್ರಭು ಗಂಜಿಹಾಳ ಮೊ:9448775346**

### ಕನ್ನಡ ನಾಡಿನ ಹಿರಿಯರು ಸಾಹಿತಿಗಳು ಬುದ್ದಿ ಜೀವಿಗಳ ಅವಿರತ ಹೋರಾಟದ ಫಲ ಈ ನಮ್ಮ ನಮ್ಮ ಕನ್ನಡ ನಾಡು ಸಾಹಿತಿ ಎಂ.ಎನ್ ರವಿಕುಮಾರ್



**ಎಂ.ಬಿ ಅಯ್ಯನಹಳ್ಳಿ :** ಹರಿದು ಹಂಚಿ ಹೋದ ಕನ್ನಡ ನಾಡನ್ನು ಒಂದು ಗೂಡಿಸಲು ನಡೆದ ಹೋರಾಟ ರೋಚಕವಾದುದ್ದು, ನಾಡಿನ ಹಿರಿಯರು ಸಾಹಿತಿಗಳು ಬುದ್ಧಿ ಜೀವಿಗಳು ಅವಿರತ ಹೋರಾಟದ ಫಲವಾಗಿ ಸುಂದರ ಕನ್ನಡ ನಾಡು ಒಂದುಗೂಡಿ ಕನ್ನಡಿಗರ ಬದುಕು ಹಸನಾಗಿದೆ ಎಂದು ಸಾಹಿತಿ ಎನ್. ಎಂ ರವಿಕುಮಾರ್ ನುಡಿದರು. ಎಮ್.ಬಿ ಅಯ್ಯನಹಳ್ಳಿ ಸುಭಾಷ್ ಚಂದ್ರ ಬೋಸ್ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆಯೋಜಿಸಿದ್ದ. ಪಂಡಿತ್ ಜವಾಹರ್ ಲಾಲ್ ನೆಹರು ಜನ್ಮ ದಿನಾಚರಣೆ ಹಾಗೂ ಕನ್ನಡ ರಾಜ್ಯೋತ್ಸವ ಪ್ರಯುಕ್ತ ನಾಡ ಹಬ್ಬವನ್ನು ಉದ್ಘಾಟಿಸಿ ಮಾತನಾಡಿದರು. ಕನ್ನಡ ಜಲ ನೆಲ ನಾಡು ನುಡಿಯನ್ನು ರಕ್ಷಿಸುವ ಜವಾಬ್ದಾರಿ ಪ್ರತಿಯೊಬ್ಬ ಕನ್ನಡಿಗನ ಮೇಲಿದೆ, ಅದಕ್ಕಾಗಿ ಪ್ರತಿ ಶಾಲಾ ಕಾಲೇಜುಗಳಲ್ಲಿ ಪ್ರತಿ ಗ್ರಾಮಗಳಲ್ಲಿ ನಾಡಹಬ್ಬ ಆಚರಿಸುವುದು ಅಗತ್ಯವಿದೆ ಎಂದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಎಂ ಸಿದ್ದ ನಾಯ್ಕ್ ವಹಿಸಿದ್ದರು, ಸಹಶಿಕ್ಷಕ ವೀರಣ್ಣ ಪ್ರಾಸ್ತವಿಕವಾಗಿ ಮಾತನಾಡಿದರು, ಶರಣ ಸಾಹಿತ್ಯ ಪರಿಷತ್ತಿನ ತಾಲೂಕ ಅಧ್ಯಕ್ಷರಾದ ಸಾ.ಮ. ಸಂಗಮೇಶ್ವರಯ್ಯ, ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಎಚ್ ಅರುಣ್ ಕುಮಾರ್ ಹೊಸಮನಿ, ಸರ್ಕಾರಿ ನೌಕರ ಸಂಘದ ಸದಸ್ಯ ಮುತ್ತುರಾಜ್ ಮಾತನಾಡಿದರು, ಶಿಕ್ಷಕರಾದ ಕೆ.ಎಂ. ವಿರೇಶ, ಬೀ ಗಾಯಿತ್ರಿ, ಕೆ ತೇಜೇಶ್ವರಿ,ಜಿ ಬಸವೇಶ್ವರ, ರಾಮಾಂಜನೇಯ, ಪವನ್ ಕುಮಾರ್, ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶಿಕ್ಷಕಿ ಬಿ.ಗಾಯತ್ರಿ ಕಾರ್ಯಕ್ರಮದ ನಿರೂಪಿಸಿದರು, ಇದೇ ಸಮಯದಲ್ಲಿ ಕಳೆದ ವರ್ಷ ಎಸ್. ಎಸ್.ಎಲ್.ಸಿ ಯಲ್ಲಿ ಕನ್ನಡದಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್.ಕೆ.ಹೊಸಹಳ್ಳಿ**

## ವರದಿಯಾದ ತಕ್ಷಣ ಸ್ಥಳಕ್ಕೆ ದೌಡಾಯಿಸಿದ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ ಅಧಿಕಾರಿಗಳು: ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದರು







### ಸರ್ಕಾರಿ ಶಾಲಾ ಕಟ್ಟಡ ಕಳಪೆ ಕಾಮಗಾರಿ, ಸರ್ಕಾರದ ಬೊಕ್ಕಸಕ್ಕೆ ನಷ್ಟ-ಗ್ರಾಮಸ್ಥರ ಆರೋಪ

ಹೋಬಳಿ ವ್ಯಾಪ್ತಿಯ 112 ವೆಂಕಟಪುರ ಗ್ರಾಮದಲ್ಲಿನ ಸರ್ಕಾರಿ ಶಾಲೆಯ ಕೊಠಡಿಯನ್ನು ಕಳಪೆಯಾಗಿ ನಿರ್ಮಿಸಿದ್ದಾರೆಂದು ಇಲ್ಲಿನ ಗ್ರಾಮಸ್ಥರು ದೂರಿದ್ದಾರೆ.
112 ವೆಂಕಟಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದು, ಈ ಶಾಲೆಗೆ "ಪಂಚಾಯತ್ ರಾಜ್ ಗ್ರಾಮೀಣ ಅಭಿವೃದ್ಧಿ ಯೋಜನೆ ಅಡಿಯಲ್ಲಿ" 16ಲಕ್ಷದ ಒಂದು ಕೊಠಡಿ ಮಂಜೂರಾಗಿದ್ದು, ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗಿದೆ. ಪ್ರಾರಂಭದಿಂದಲೇ ಕಟ್ಟಡಕ್ಕೆ ನೀರು ಹಾಕದೆ ಕಾಮಗಾರಿ ಮಾಡಿದ್ದು ಕಳಪೆಯಾಗಿದೆ ಎಂದು ಸ್ಥಳೀಯರ ಆಕ್ರೋಶಕ್ಕೆ ಕಾರಣವಾಗಿದೆ.
ಆರೋಪ ಏನು : ಶಾಲಾ ಕೊಠಡಿ ಮಂಜೂರಾಗಿ ನಿರ್ಮಿಸಿರುವ ಕಟ್ಟಡಗಳಿಗೆ, ನಿರ್ಮಾಣ ಹಂತದಿಂದ ಸರಿ ಸುಮಾರು ಒಂದು ವರೆ ತಿಂಗಳಾದರೂ ಸರಿಯಾಗಿ ನೀರು ಹಾಕಿಲ್ಲ. ಸುಮಾರು 60ವರ್ಷದ ವೃದ್ಧನನ್ನು ನೀರು ಹಾಕಲು ಬಿಟ್ಟಿದ್ದಾರೆ. ವಯಸ್ಸಾದ ಅಜ್ಜ ಬಿಂದಿಗೆಯಲ್ಲಿ ನೀರು ತುಂಬಿಕೊಂಡು ಕಟ್ಟಡದ ಮೇಲಕ್ಕೆ ಹತ್ತಿ ನೀರನ್ನು ಹಾಕಲು ಹೇಗೆ ಸಾಧ್ಯ. ಒಳಗಡೆ ಹಾಕಬಹುದು ಆದರೆ ಹಿಂದಿನ ಮತ್ತು ಹೊರಭಾಗಗಳಲ್ಲಿ ನೀರು ಹಾಕಲು ಸಾಧ್ಯವೇ ಇಲ್ಲ. ಅಷ್ಟು ಎತ್ತರಕ್ಕೆ ಪೈಪ್ ಮೂಲಕವೇ ಹಾಕಬೇಕು. ಈ ಸಮಯದಲ್ಲಿ ಆಕಸ್ಮಾತ್ ಆತನಿಗೆ ಮೆಟ್ಟಿಲು ಮತ್ತು ಏಣಿ ಹತ್ತುವಾಗ ಇಳಿಯುವಾಗ ಆಯತಪ್ಪಿ ಅಪಾಯವಾದರೆ ಹೊಣೆಯಾರು.
ಕಟ್ಟಡಕ್ಕೆ ಟಾಪ್, ಕಾಂಕ್ರೀಟ್ ನ್ನು ಶನಿವಾರ 2.11.2024ರಂದು ಮುಂಜಾನೆಯಿಂದ ಶುರುಮಾಡಿ 1:00ಘಂಟೆ ಸುಮಾರಿಗೆ ಕೆಲಸ ಮುಗಿಸಿದರು. ಭಾನುವಾರ 3.11.2024ರಂದು ಕ್ಯೂರಿಂಗ್ ಮಾಡಲು ನೀರು ನಿಲ್ಲಿಸುವುದಕ್ಕಾಗಿ ಮಡಿ ಕಟ್ಟಿದರು. ಸೋಮವಾರ ಮತ್ತು ಮಂಗಳವಾರ ನೀರು ಹಾಕಬೇಕಿತ್ತು ಆದರೆ ಎರಡು ದಿನ ನೀರು ಹಾಕಿಲ್ಲ. ನೀರಿಲ್ಲದೇ ಟಾಪ್ ಹಾಕಿರುವ ಕಾಂಕ್ರೀಟ್ ಹೇಗೆ ಸೆಟ್ ಆಗುತ್ತದೆ. ಕಳಪೆ ಕಾಮಗಾರಿ ಎದ್ದು ಕಾಣುತ್ತಿದೆ.
ಸಾರ್ವಜನಿಕ ಶಾಲೆಯನ್ನು ಈರೀತಿಯಾಗಿ ಬೇಕಾಬಿಟ್ಟಿ ಕಟ್ಟಿದರೆ ಹೇಗೆ. ಸರಿಯಾಗಿ ಕ್ಯೂರಿಂಗ್ ಮಾಡಿ ಕಟ್ಟಡ ಕಟ್ಟಬೇಕು ಕ್ಯೂರಿಂಗ್ ಮಾಡದೇ ಮಾಡಿದರೆ 5, ಅಥವಾ 10ವರ್ಷಕ್ಕೆ ಬಿದ್ದು ಹೋಗುತ್ತವೆ. ಮಾಡಿ ಪ್ರಯೋಜನವೇನು. ನೂರಾರು ಮಕ್ಕಳು ಕಲಿಯಲು ಬರುತ್ತಾರೆ ಒಂದು ವೇಳೆ ಮೇಲೆ ಬಿದ್ದರೆ ಗತಿ ಏನು. ಈಗ ಮಾಡಿರುವ ಮೆಟ್ಟಿಲುಗಳು ಕಾಲಿನಿಂದ ಒದ್ದರೆ ಕಿತ್ತೋಗಿವೆ. ಇದಕ್ಕೆ ಕಾರಣ ನೀರು ಹಾಕದೆ ಕ್ಯೂರಿಂಗ್ ಮಾಡದಿರುವುದು. ಇಲ್ಲಿ ಪಂಪ್ ಸೆಟ್ ನೀರಿದೆ ಅದನ್ನು ಬಳಕೆಮಾಡಿಕೊಂಡಿಲ್ಲ. ಇಂತಹ ದೊಡ್ಡ ಕಟ್ಟಡಕ್ಕೆ ಕೈಲಿಂದ ನೀರು ಉಗ್ಗಿದರೆ ಹೇಗೆ ಕ್ಯೂರಿಂಗ್ ಆಗುತ್ತದೆ.
ಇದುವರೆಗೂ ಇಂಜಿನಿಯರ್ ಮತ್ತು ಕಾಂಟ್ರಾಕ್ಟರ್ ಸ್ಥಳಕ್ಕೆ ಬಂದೇ ಇಲ್ಲ ನಾವೂ ನೋಡಿಲ್ಲ. ಇದುವರೆಗೂ ಮೇಸ್ತ್ರಿಯಿಂದಲೇ ಕೆಲಸ ನಡೆಸಿದ್ದಾರೆ. ಇಂಜಿನಿಯರ್ ಆದವರು ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಬಂದು ಗಮನಿಸುತ್ತಿರಬೇಕು. ಇಲ್ಲಿ ಇವರು ಮಾಡಿದ್ದೇ ಕೊನೇ ಎಂಬಂತಾಗಿದೆ ಇಂಜಿನಿಯರ್ ಕೂಡಲೇ ಸ್ಥಳಕ್ಕೆ ಬಂದು ಕ್ವಾಲಿಟಿ ಪರೀಕ್ಷಿಸಬೇಕು ಎಂದು ಗ್ರಾಮದ ಮುಖಂಡ ಬಸವರಾಜ್ ಮತ್ತು ಗ್ರಾಮ ಪಂಚಾಯಿತಿ ಸದಸ್ಯ ಗೋಸಿ ಗಾಳೆಪ್ಪ ದೂರಿದರು. ದ್ಯಾಮಪ್ಪ, ರಾಮಣ್ಣ ಹನುಮಂತಪ್ಪ ಇದ್ದರು. ಶಾಲಾ ಕಟ್ಟಡಗಳನ್ನು ಈ ರೀತಿಯಾಗಿ ನಿರ್ಮಿಸಿದರೆ 10ವರ್ಷ ಬಾಳಿಕೆ ಬರುವುದಿಲ್ಲ. ಬಹುಬೇಗ ಬಿದ್ದು ಹೋಗುತ್ತವೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುತ್ತದೆ. ಮತ್ತೆ ಶಾಲೆಗಳಿಗೆ ಕಟ್ಟಡ ಕೊಡಲು ತುಂಬಾ ವರ್ಷಗಳೇ ಹಿಡಿಯುತ್ತವೆ. ಗುತ್ತಿಗೆದಾರರು ನಿಯಮಾನುಸಾರ ಕಟ್ಟಡಗಳನ್ನು ನಿರ್ಮಿಸಬೇಕು. ಚೆನ್ನಬಸಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಹೊಸಪೇಟೆ. **ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಾಲತೇಶ್.ಶೆಟ್ಟರ್. ಹೊಸಪೇಟೆ**

**ಸಿಹಿ ಕಹಿ ಸುದ್ದಿ**

**ಮರಿಯಮ್ಮನಹಳ್ಳಿ :** ಹೋಬಳಿ ವ್ಯಾಪ್ತಿಯ 112 ವೆಂಕಟಪುರ ಗ್ರಾಮದಲ್ಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಯನ್ನು ಕಳಪೆಯಾಗಿ ನಿರ್ಮಿಸಿದ್ದಾರೆಂದು ಇಲ್ಲಿನ ಗ್ರಾಮಸ್ಥರು ದೂರಿದ್ದಾರೆ ಎನ್ನುವ ಕುರಿತು. "ಸರ್ಕಾರಿ ಶಾಲಾ ಕಟ್ಟಡ ಕಳಪೆ ಕಾಮಗಾರಿ, ಸರ್ಕಾರದ ಬೊಕ್ಕಸಕ್ಕೆ ನಷ್ಟ, ಗ್ರಾಮಸ್ಥರ ಆರೋಪ. ಎನ್ನುವ ಶೀರ್ಷಿಕೆ ಅಡಿ "ನಾಗರಿಕ" ಕನ್ನಡ ದಿನ ಪತ್ರಿಕೆಯಲ್ಲಿ ನವೆಂಬರ್ 14 ರಂದು ವಿಸ್ತೃತ ವರದಿ ಪ್ರಕಟಿಸಿತ್ತು.
ವರದಿ ಬೆನ್ನಲ್ಲೇ ಸ್ಪಂದಿಸಿದ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಇಲಾಖೆಯಿಂದ ಕಾರ್ಯನಿರ್ವಾಹಕ ಇಂಜಿನಿಯರ್ ಸಾಯಿಬಣ್ಣ ಮತ್ತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಸುರೇಶ್ ಇಂದು 112 ವೆಂಕಟಾಪುರ ಗ್ರಾಮದಲ್ಲಿನ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿ. ಕೊಠಡಿಯ ಕಟ್ಟಡ ಕಾಮಗಾರಿ ವೀಕ್ಷಿಸಿ. ಕುರಿತು ಹೆಚ್ಚಿನ ಮಾಹಿತಿ ಪಡೆದು ಗುತ್ತಿಗೆದಾರರನ್ನು ತರಾಟೆಗೆ ತೆಗೆದು ಕೊಂಡು ನಿಯಮನುಸಾರ ಕಾಮಗಾರಿ ಮಾಡಲು ಸೂಚಿಸಿದರು.
ಈ ಸಂಧರ್ಭದಲ್ಲಿ ಗ್ರಾಮದ ಸದಸ್ಯರಾದ ಗೋಸಿ ಗಾಳೆಪ್ಪ, ಮಲ್ಲೇಶಿ, ರಾಮ ಇತರರಿದ್ದರು.

**ತಾಲೂಕ ವರದಿಗಾರರು,**
**ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ**
**ಎಸ್.ಕೆ ನ್ಯೂಸ್ ಕನ್ನಡ ಚಾನಲ್:**
**ಮಾಲತೇಶ್.ಶೆಟ್ಟರ್.ಹೊಸಪೇಟೆ**

**ಕಟ್ಟಡ ಕಾಮಗಾರಿ ವೀಕ್ಷಿಸಿದ್ದು . ಹೆಚ್ಚಿನ ಮಾಹಿತಿ ಪಡೆಯಲಾಗಿದೆ. ಸದ್ಯ ಕಟ್ಟಡ-ಕ್ಕೆ ಪ್ಲಾಸ್ಟಿಂಗ್ ಮಾಡದೆ 21 ದಿನಗಳ ಕಾಲ ಬೆಳೆಗ್ಗೆ, ಮಧ್ಯಾಹ್ನ, ಮತ್ತು ಸಾಯಂಕಾಲ ನಿರಂತರ ನೀರು ಹಾಕಿ ಕ್ಯೂರಿಂಗ್ ಮಾಡಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ನೀರು ಹಾಕಲು ನೇಮಿಸಿದ್ದ ವೃದ್ಧನನ್ನು ಮತ್ತು ಇತರೆ ಕೆಲಸಗಾರರನ್ನು ಬದಲಾಯಿಸಲು ತಿಳಿಸಲಾಗಿದೆ. ಕಟ್ಟಡದ ಗುಣಮಟ್ಟ ಪರಿಶೀಲನೆಗಾಗಿ ಸೋಮವಾರ ಅಥವಾ ಮಂಗಳವಾರ ರಂದು ಮೂರನೇ ವ್ಯಕ್ತಿಯ ತಪಾಸಣೆಗೆ ಕಳುಹಿಸಿ ಕೊಡಲಾಗುವುದು. ಲೋಪ ಕಂಡು ಬಂದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.**

**- ಸಾಯಿಬಣ್ಣ,**
**ಜಿಲ್ಲಾ ಪಂಚಾಯತ**
**ಕಾರ್ಯನಿರ್ವಾಹಕ ಇಂಜಿನಿಯರ್.**

## ಬಂಡಿಗಣಿ ಮಠದ ಕಾರ್ಯ ಶ್ಲಾಘನೀಯವಾದದ್ದು




**ರಬಕವಿ-ಬನಹಟ್ಟಿ :** ಮಠ-ಮಾನ್ಯಗಳು ಸರ್ಕಾರದಷ್ಟೇ ಪ್ರಖರವಾಗಿ ಬೆಳೆಯುತ್ತಿವೆ. ರಬಕವಿ-ಬನಹಟ್ಟಿ ತಾಲೂಕಿನ ಬಂಡಿಗಣಿ ಮಠವು ಅನ್ನದಾಸೋಹದ ಜೊತೆಗೆ ಶಿಕ್ಷಣ, ಸಮಾಜದಲ್ಲಿ ಕ್ರಾಂತಿ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಇಂತಹ ಮಠಗಳು ರಾಜ್ಯದಲ್ಲಿ ಮತ್ತಷ್ಟು ಬೆಳೆದಾಗ ಬಡತನ, ಅನಕ್ಷರತೆಯಿಂದ ದೂರವಾಗಲು ಕಾರಣವಾಗಲಿದೆ ಎಂದು ಸಚಿವ ಎಚ್. ಕೆ. ಪಾಟೀಲ ತಿಳಿಸಿದರು.
ಈಚೆಗೆ ಸುಕ್ಷೇತ್ರ ಸೊಗಲಮಠದ ಜೀರ್ಣೋ9ದ್ಧಾರ ಸಮಿತಿಯಿಂದ ಜರುಗಿದ ಶ್ರೀ ಸೋಮೇಶ್ವರ ಅನ್ನದಾಸೋಹ ಚಕ್ರವರ್ತಿ ಪ್ರಶಸ್ತಿ ಪುರಸ್ಕಾರ ಸಂದರ್ಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಸತತ ಮೂರು ದಶಕಗಳಿಂದ ಅನ್ನದಾಸೋಹ ಸೇವೆಗೈದು ಮಠ-ಮಾನ್ಯಗಳಿಗೆ ಮಾದರಿಯಾಗುವುದರ ಜೊತೆಗೆ ಲಕ್ಷಾಂತರ ಭಕ್ತರ ಬೇಡಿಕೆ ಈಡೇರಿಕೆಗೆ ಯಶಸ್ವಿಯಾಗಿರುವ ಬಂಡಿಗಣಿಯ ನೀಲಮಾಣಿಕ ಮಠದ ಶ್ರೀ ಅನ್ನದಾನೇಶ್ವರ ಮಹಾಸ್ವಾಮಿಗಳ ಕಾರ್ಯ ಶ್ಲಾಘನೀಯವೆಂದರು.
ಅನ್ನದಾನೇಶ್ವರ ಶ್ರೀಗಳು ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಜನರ ಏಳ್ಗೆಗಾಗಿಯೇ ಶ್ರಮಿಸುತ್ತಿರುವ ಮಠ-ಮಾನ್ಯಗಳಿಗೆ ಖಾಕಿ-ಖಾದಿ ಪ್ರೋತ್ಸಾಹಿಸಿದ್ದಲ್ಲಿ ರಾಮರಾಜ್ಯವಾಗುವಲ್ಲಿ ಕಾರಣವಾಗಲಿದೆ. ನಿರಂತರ ಜನರ ಸೇವೆಯಲ್ಲಿರುವ ಬಂಡಿಗಣಿ ಮಠದ ಭಕ್ತರು ಭಕ್ತಿ-ಭಾವದಿಂದ ಯಾವುದೇ ಅಪೇಕ್ಷೆಯಿಲ್ಲದೆ ನಡೆದುಕೊಳ್ಳುತ್ತಿರುವುದಕ್ಕೆ ಧನ್ಯತೆಯಾಗಿದೆ. ಸರ್ಕಾರದಿಂದ ಮಠಗಳಿಗೆ ಇನ್ನಷ್ಟು ಸಹಾಯ-ಸಹಕಾರ ದೊರೆಯಬೇಕೆಂದರು.
ಸುಕ್ಷೇತ್ರ ಸೊಗಲ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ವೀರನಗೌಡ ಸಂಗನ್ನವರ ಮಾತನಾಡಿ, ಕೇವಲ ಅನ್ನದಾಸೋಹವಷ್ಟೇ ಅಲ್ಲದೆ ಹೋಳಗಿ, ತರಹೆವಾರಿ ಪಲ್ಯದೊಂದಿಗೆ ಮೃಷ್ಟಾನ್ನ ಭೋಜನ ಏರ್ಪಡಿಸುವ ಕಾಯಕ ಬಂಡಿಗಣಿ ಮಠದ್ದಾಗಿದ್ದು, ಈ ಮಠಕ್ಕೆ ಒದಗುವ ಸಹಾಯ-ಸಹಕಾರ ನಿರಂತರ ವರ್ಷವಿಡೀ ಅನ್ನದಾಸೋಹ ನಡೆಯಲು ಕಾರಣಗಳ ಮೂಲವೇ ದೊರೆಯುವದಿಲ್ಲ. ಅಷ್ಟೊಂದು ಮುಕ್ತ ಹಾಗು ಪ್ರಚಾರ ಬಯಸದೇ ಭಕ್ತರು ನಿತ್ಯ ಮಠದ ಸೇವೆಗೆ ಮುಂದಾಗಿರುವದು ವಿಶೇಷವೆಂದರು.
ಇದೇ ಸಂದರ್ಭ ಹೊಸೂರಿನ ಗುರು ಮಡಿವಾಳೇಶ್ವರ ಮಠದ ಗಂಗಾಧರ ಮಹಾಸ್ವಾಮಿಗಳು ಸಾನಿಧ್ಯ ವಹಿಸಿದ್ದರು. ಸಮಿತಿ ಧರ್ಮದರ್ಶಿ ನಿಂಗಯ್ಯ ಸ್ವಾಮೀಜಿ, ಶಿವಾನಂದ ಟಕ್ಕಳಕಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ಮಕ್ಕಳ ಪ್ರತಿಭೆಗೆ ಸೂಕ್ತ ವೇದಿಕೆ



**ರಬಕವಿ-ಬನಹಟ್ಟಿ :** ಮಕ್ಕಳು ಪ್ರತಿಭೆಯ ಕಣಜ. ಅವರಲ್ಲಿ ಅಗಾಧ ಪ್ರತಿಭೆ ಅಡಗಿದೆ. ಸೂಕ್ತ ವೇದಿಕೆ ಒದಗಿಸುವ ಮೂಲಕ ಮಕ್ಕಳ ಪ್ರತಿಭೆಗೆ ಪುರಸ್ಕಾರ ನೀಡಬೇಕು. ತಾಲೂಕಿನ ಮಕ್ಕಳ ಸಾಹಿತ್ಯ ಪರಿಷತ್ತು ಈ ದಿಶೆಯಲ್ಲಿ ಮಾಡುತ್ತಿರುವ ಕಾರ್ಯ ಶ್ಲಾಘನೀಯ ಎಂದು ಮುಖ್ಯ ಗುರು ಚಿಕ್ಕಯ್ಯ ಬುದ್ನಿ ಹೇಳಿದರು.
ಶನಿವಾರ ತಾಲೂಕಿನ ಎರಡನೇ ಮಕ್ಕಳ ಸಾಹಿತ್ಯ ಸಮ್ಮೇಳನದ ನಿಮಿತ್ಯವಾಗಿ ಸರ್ವಾಧ್ಯಕ್ಷರನ್ನು ಆಯ್ಕೆ ಮಾಡಲು ನಡೆದ ಬಹುಮುಖ ಪ್ರತಿಭೆಯುಳ್ಳ ಮಕ್ಕಳ ವಿವಿಧ ಸ್ಪರ್ಧೆಗಳನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.
ತಾಲೂಕಿನ ವಿವಿಧ ಶಾಲೆಗಳ ಸುಮಾರು ಇನ್ನೂರು ವಿದ್ಯಾರ್ಥಿಗಳು ಭಾಗವಹಿಸಿ ಪ್ರಬಂಧ, ಭಾಷಣ, ಕವನ ವಾಚನ, ಚಿತ್ರಕಲೆ, ರಸಪ್ರಶ್ನೆ, ರಾಜ್ಯ, ರಾಷ್ಟ್ರಮಟ್ಟದ ವಿಶೇಷ ಸಾಧನೆ ಸೇರಿದಂತೆ ತಮ್ಮ ವಿಶೇಷ ಪ್ರತಿಭೆಯನ್ನು ಅನಾವರಣ ಮಾಡಿದರು.
ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಈರಣ್ಣ ಲಟ್ಟಿ ಮಾತನಾಡಿ ಇಂದಿನ ಮಕ್ಕಳೇ ನಾಳಿನ ನಾಗರಿಕರು. ಅವರನ್ನು ತಿದ್ದಿ ತೀಡುವ ಮೂಲಕ ಸತ್ಪ್ರಜೆಗಳಾಗಿ ರೂಪಿಸಬೇಕು ಎಂದರು.
ಪ್ರಾಸ್ತಾವಿಕವಾಗಿ ಮಾತನಾಡಿದ ತಾಲೂಕು ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷೆ ಶೈಲಾ ಬುರ್ಲಿ ಮಾತನಾಡಿ ಮಕ್ಕಳ ಸಾಹಿತ್ಯ ಸಮ್ಮೇಳನವನ್ನು ತುಂಬಾ ಅರ್ಥಪೂರ್ಣವಾಗಿ ಆಚರಿಸಲು ಯೋಜಿಸಲಾಗಿದ್ದು ತಾಲೂಕಿನ ಎಲ್ಲಾ ಸಂಘಟನೆಗಳ ಸಹಾಯ ಸಹಕಾರ ಪಡೆಯಲಾಗುತ್ತಿದೆ ಎಂದರು.
ಪ್ರಧಾನ ಕಾರ್ಯದರ್ಶಿ ಕಿರಣ ಕರ್ಲಟ್ಟಿ, ಸಂಘಟನಾ ಕಾರ್ಯದರ್ಶಿ ನಂದಿನಿ ಕುಲಕರ್ಣಿ, ಸಿ. ಬಿ. ಪಾಲಭಾಂವಿ, ಉಪಾಧ್ಯಕ್ಷೆ ಸಾವಿತ್ರಿ ಚಾಂಭಾರ, ಸಂಜು ಮಹಾಜನ, ರಾಜಶ್ರೀ ಬಾಣಕಾರ, ಸಂತೋಷಿ ರಾಮದುರ್ಗ, ಬಿ. ವಿ. ತೆಗ್ಗಿ, ಶಿವಾನಂದ ಮೊದಲಾದವರು ಭಾಗವಹಿಸಿದ್ದರು.
ಹೇಮಾ ಜೀರಂಕಲಗಿ ಸ್ವಾಗತಿಸಿದರು. ಸವಿತಾ ಕಿತ್ತೂರ ವಂದಿಸಿದರು.

## ವಿದ್ಯಾರ್ಥಿಗಳೇ ಶಿಕ್ಷಕರ ನಿಜವಾದ ಸಂಪತ್ತು



**ರಬಕವಿ-ಬನಹಟ್ಟಿ :** ವಿದ್ಯಾರ್ಥಿಗಳೇ ಶಿಕ್ಷಕರ ನಿಜವಾದ ಸಂಪತ್ತು. ವಿದ್ಯಾರ್ಥಿಗಳ ಸಾಧನೆಯಿಂದಾಗಿ ಶಿಕ್ಷಕರಿಗೆ ಅಪಾರ ಗೌರವ ದೊರೆಯುತ್ತದೆ. ವಿದ್ಯಾರ್ಥಿಗಳು ಸಮಾಜಕ್ಕೆ ಮಾದರಿಯಾಗುವ ನಿಟ್ಟಿನಲ್ಲಿ ಬೆಳೆದು ನಿಲ್ಲಬೇಕೆಂದು ಹಿರೇಮಠದ ಶರಣಬಸವ ಶಿವಾಚಾರ್ಯರು ತಿಳಿಸಿದರು.
ಶನಿವಾರ ಲಕ್ಷ್ಮಿ ನಗರದ ಲಕ್ಷ್ಮಿದೇವಿ ಸಮುದಾಯ ಭವನದಲ್ಲಿ 1997-98 ನೇ ಸಾಲಿನಲ್ಲಿ ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳು ಹಮ್ಮಿಕೊಂಡ ಗುರು ವಂದನಾ ಮತ್ತು ಸ್ನೇಹ ಸಂಗಮದ ಬೆಳ್ಳಿ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.
ವಿದ್ಯಾರ್ಥಿಗಳು ತಮ್ಮ ಗುರುವಿಗಿಂತ ಉತ್ತಮವಾದ ಸ್ಥಾನ ಪಡೆದುಕೊಂಡಾಗ ಶಿಕ್ಷಕರು ಹೆಮ್ಮೆ ಪಡುತ್ತಾರೆಂದರು.
ಆರ್. ಟಿ. ನಡುವಿನಮನಿ ಮಾತನಾಡಿ, ಸಮಾಜಕ್ಕೆ ಬದುಕಾಗಬೇಕು. ಪ್ರತಿಯೊಬ್ಬರೂ ಕಟ್ಟಕಡೆಯ ವ್ಯಕ್ತಿಯ ಏಳ್ಗೆಗೆ ಶ್ರಮಿಸುವ ಮೂಲಕ ಬಡತನ ಸಮಸ್ಯೆ ಎದುರಿಸುತ್ತಿರುವವರ ಏಳ್ಗೆಗೆ ಶ್ರಮಿಸಬೇಕೆಂದರು.
ಮೈಗೂರಿನ ಗುರುಪ್ರಸಾದ ಮಹಾಸ್ವಾಮೀಜಿ, ರಬಕವಿಯ ಗುರುಸಿದ್ಧೇಶ್ವರ ಶ್ರೀಗಳು ಸಾನಿಧ್ಯ ವಹಿಸಿದ್ದರು. ವೇದಿಕೆ ಮೇಲೆ ಬಿ. ಎ. ದೇಶಪಾಂಡೆ, ಬಿ. ಎಸ್. ರಾಮತೀರ್ಥ, ಬಿ. ಎಸ್. ಮಿಳ್ಳಿ, ಎಂ. ಡಿ. ಪತ್ರಿ, ಕೆ. ಜಿ. ಉಮದಿ, ಆರ್. ಜಿ. ನಾವಿ, ಎಂ. ಆರ್. ರಾವಳ, ಟಿ. ಎಸ್. ಗೊಂದಕರ ವೇದಿಕೆ ಮೇಲಿದ್ದರು.
ಈರಣ್ಣ ಕೊಣ್ಣೂರ, ಮುದಕಪ್ಪ ಶೇಗುಣಸಿ, ಸುರೇಶ ಗೊಂದಕರ, ಪ್ರಕಾಶ ಶೇಗುಣಸಿ, ಆನಂದ ಬಂಗಿ, ರವಿ ಬಾಗೇವಾಡಿ, ಶ್ರೀಶೈಲ ಶೇಗುಣಸಿ, ರಾಣಿ ಮೋಳೆ, ಉಮಾ ಕಾಡದೇವರ, ಗೀತಾ ಮುಗತಿ, ಸಂಗೀತಾ ಖಾನಾಪೂರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ತೇರದಾಳದಲ್ಲಿ ಯುವಜನೋತ್ಸವ
## ಈ ನಾಡಿನಲ್ಲಿ ಬಡವರು ಬಾಳಬೇಕು-ರವಿ ಚನ್ನಣ್ಣವರ



**ತೇರದಾಳ :** ಬುದ್ಧ ಬಸವಣ್ಣ ಡಾ. ಅಂಬೇಡ್ಕರ್ ಅವರಂತಹ ಮಹಾನ್ ವ್ಯಕ್ತಿ ತ್ಯಾಗಿಗಳನ್ನು ಕಂಡ ಶ್ರೇಷ್ಠನಾಡು ಇದು. ಯಾರದ್ದೋ ಯಾವುದ್ದೋ ಮುಲಾಜಿನಲ್ಲಿ ನಾವು ಸಿಲುಕಿಕೊಳ್ಳಬಾರದು. ಈ ನಾಡಿನಲ್ಲಿ ಬಡವರು ಬದಕಬೇಕು ಅಭಿವೃದ್ಧಿ ಹೊಂದಬೇಕೆಂದು ಬೆಂಗಳೂರು ಡಿಐಜಿಪಿ ರವಿ ಚನ್ನಣ್ಣವರ ಹೇಳಿದರು.
ತೇರದಾಳ ಅಲ್ಲಮಪ್ರಭುದೇವರ ನೂತನ ಮಂದಿರ ಲೋಕಾರ್ಪಣೆ ನಿಮಿತ್ತ ಶುಕ್ರವಾರ ಸಂಜೆ ಹಮ್ಮಿಕೊಂಡಿದ್ದ ಯುವಜನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.
ಪುಣ್ಯ ಕ್ಷೇತ್ರಗಳಲ್ಲಿ ಜನ್ಮ ತಾಳುವುದೇ ಒಂದು ಸೌಭಾಗ್ಯ. ಪ್ರತಿಯೊಂದು ಮನೆಯೂ ಅನುಭವ ಮಂಟಪ ಆಗಬೇಕು. ತಪ್ಪನ್ನು ಒಪ್ಪಿಕೊಳ್ಳದೆ ಪ್ರಶ್ನೆ ಮಾಡುವುದನ್ನು ರೂಢಿಸಿಕೊಳ್ಳಬೇಕು. ಕಾಯಕವೇ ಕೈಲಾಸ ಎಂಬ ತತ್ವ ಅಳವಡಿಸಿಕೊಂಡು ಬದುಕಿದಾಗ ಮಾತ್ರ ಸುಂದರ ಬದುಕು ಕಟ್ಟಿಕೊಳ್ಳಲು ಸಾಧ್ಯ ಎಂದು ಹೇಳಿದ ರವಿ ಚನ್ನಣ್ಣವರ, ಜಮೀನುಗಳಲ್ಲಿ ಬೆಳೆಗಳ ಜತೆಗೆ ಕಸವೂ ಬೆಳೆಯುತ್ತಿದೆ. ಅದರಂತೆ ಮನುಷ್ಯ ಬೆಳೆಯುತ್ತಿದ್ದಂತೆ ದುಶ್ಚಟಗಳು ಕೂಡ ಬೆಳೆಯುತ್ತವೆ.
ಆದ್ದರಿಂದ ಕಸವನ್ನು ಕಿತ್ತು ಹಾಕಿದಂತೆ ಮಕ್ಕಳಲ್ಲಿನ ದುಶ್ಚಟಗಳನ್ನು ಹೊಡೆದಾಕುವ ಕೆಲಸ ಪಾಲಕರು ಮಾಡಬೇಕೆಂದು ಕರೆ ನೀಡಿದರು.
ಬೈಲೂರಿನ ನಿಜಗುಣಾನಂದ ಶ್ರೀ ಮಾತನಾಡಿ, ಬಸವಣ್ಣ ಎಂದರೆ ಕೆಲವರಿ ಅರಗಿಸಿಕೊಳ್ಳಲು ಆಗುವುದಿಲ್ಲ. ಆದರೆ ಬಸವಣ್ಣನಿಂದಲೇ ನಾನು ಸದ್ಭಕ್ತನಾದೆ ಎಂದು ಅಲ್ಲಮಪ್ರಭುದೇವರು ಹೇಳಿದ್ದನ್ನು ಮರೆಯಬೇಡಿ ಎಂದು ಹೇಳಿದರು. ಬಸವಣ್ಣ ರಾಷ್ಟ್ರ ಧರ್ಮವನ್ನು ಕಟ್ಟಿದ ಆದರೆ ಇಂದು ಧರ್ಮದ ಹೆಸರಿನಲ್ಲಿ ರಾಜಕಾರಣಿಗಳು ರಾಜಕೀಯ ಮಾಡುತ್ತಿರುವುದು ಖೇದಕರ ಸಂಗತಿಯಾಗಿದೆ.
ಆದ್ದರಿಂದ ಯುವಕರ ಕೈಗಳಿಗೆ ರಾಜಕೀಯ ಧ್ವಜಗಳನ್ನು ನೀಡದೆ ಕಾಯಕವೇ ಕೈಲಾಸ ಎಂಬ ಧ್ವಜಗಳನ್ನು ನೀಡಿ ಎಂದು ಮಾರ್ಮಿಕವಾಗಿ ಹೇಳಿದರು.
ಮಣಕವಾಡ ದೇವಮಂದಿರ ಮಠದ ಅಭಿನವ ಮೃತ್ಯುಂಜಯ ಶ್ರೀ, ಹಾವೇರಿ ಹುಕ್ಕೇರಿಮಠದ ಸದಾಶಿವ ಶ್ರೀ ಮಾತನಾಡಿದರು. ಡಾ. ಮಹಾಂತ ಪ್ರಭು ಶ್ರೀ, ಗಂಗಾದರ ದೇವರು, ವಿರುಪಾಕ್ಷ ದೇವರು, ತೇರದಾಳದ ಐಎಎಸ್ ಅಧಿಕಾರಿ ಇಬ್ರಾಹಿಂ ಮೈಗೂರ, ವಿಜಯಮಹಾಂತೇಶ ನಾಡಗೌಡ, ನಿಲೇಶ ದೇಸಾಯಿ, ಶಂಕರ ಉಗಾರ ಮತ್ತಿತರಿದ್ದರು.

# ಕನ್ನಡ ಭಾಷೆ ಬೆಳವಣಿಗೆ ಅಗತ್ಯವಿದೆ: ಪ್ರೊ. ಲಕ್ಷ್ಮೀ ಮೋರೆ




**ವಿಜಯಪುರ :** ನಾವೆಲ್ಲ ಇಂದು ಡಿಜಿಟಲ್ ಯುಗದಲ್ಲಿದ್ದೇವೆ. ಇದಕ್ಕನುಗುಣವಾದ ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿದೆ. ಇದಕ್ಕೆ ಹೊಂದಿಕೊಂಡು ಕರ್ನಾಟಕದಲ್ಲಿ ಜನ ವಿವಿಧ ಭಾಷೆಗಳಲ್ಲಿ ಬೆರೆಯುತ್ತ ನಡೆಯುತ್ತಿದ್ದಾರೆ. ಇಂಥ ಬಹುತ್ವದ ಸಂದರ್ಭದಲ್ಲಿ ಕನ್ನಡ ನಾಡು-ನುಡಿಯನ್ನು ಜನ ಮರೆಯದೆ ಅಭಿಮಾನದಿಂದ ಬೆಳೆಸಬೇಕಾದ ಅನಿವಾರ್ಯತೆ ಇದೆ ಎಂದು ನಗರದ ಸರಕಾರಿ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥೆ ಪ್ರೊ. ಲಕ್ಷ್ಮೀ ಮೋರೆ ಅಭಿಪ್ರಾಯಪಟ್ಟರು.

ನಗರದ ಸಿಕ್ಯಾಬ್ ಶಿಕ್ಷಣ ಸಂಸ್ಥೆಯ ಎ.ಆರ್.ಎಸ್. ಇನಾಮದಾರ ಪದವಿ ಮಹಿಳಾ ಮಹಾವಿದ್ಯಾಲಯದ ಕನ್ನಡ ವಿಭಾಗ ಹಾಗೂ ಆಂತರಿಕ ಗುಣಮಟ್ಟ ಭರವಸೆಯ ಕೋಶ ವಿಭಾಗ ಹಮ್ಮಿಕೊಂಡ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ಕನ್ನಡವನ್ನು ಕರ್ನಾಟಕದ ಜನತೆ ಭೇದ-ಭಾವ ಮರೆತು ಬೆಳೆಸಬೇಕು. ಇದಕ್ಕೆ ವೈಭವದ ಇತಿಹಾಸವಿದೆ. ಇದು ಬರೀ ನುಡಿಯಲ್ಲ. ನಮ್ಮ ಭಾವದ ಬೆಡಗು. ಇದನ್ನು ಅನ್ನದ ಭಾಷೆಯಾಗುವಲ್ಲಿ ಸರಕಾರ ಆಸಕ್ತಿ ವಹಿಸಿ ವಿದ್ಯುನ್ಮಾನ ಯುಗದಲ್ಲಿ ಶ್ರೇಷ್ಠವಾಗಿ ಬೆಳೆಯಲು ಕಾಳಜಿ ವಹಿಸಬೇಕೆಂದು ಆಶಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಎಚ್.ಕೆ. ಯಡಹಳ್ಳಿ ಅವರು ಮಾತನಾಡಿ, ಗ್ರಾಮೀಣ ಭಾಗದಲ್ಲಿ ದೇಶಿ ಕನ್ನಡ ಜೀವಂತವಾಗಿದೆ. ಈ ಕಾರಣ ಕನ್ನಡದ ಕುರಿತು ಕೀಳರಿಮೆ ಹೋದರೆ ಬರಹ ಓದು ಹಾಗೂ ಮಾತುಗಳಲ್ಲಿ ನಾವೆಲ್ಲ ಕನ್ನಡ ಬಳಸಬೇಕು. ಕನ್ನಡ ನಾಡಿನಲ್ಲಿ ಕನ್ನಡವೇ ಅಗ್ರಗಣ್ಯ ಭಾಷೆ. ಇದನ್ನು ಅರಿತು ಜನರು ಕನ್ನಡವನ್ನು ಪ್ರೀತಿ ಅಭಿಮಾನದಿಂದ ಮೊದಲು ಕಲಿತು ಬೇಕಾದಷ್ಟು ಭಾಷೆಗಳನ್ನು ಕಲಿಯಿರಿ ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಉಪಪ್ರಾಚಾರ್ಯ ಡಾ. ಹಾಜಿರಾ ಪರವೀನ, ಆಂತರಿಕ ಗುಣಮಟ್ಟ ಭರವಸೆ ಕೋಶದ ಸಂಯೋಜಕ ಪ್ರೊ. ಎಂ.ಎಂ. ಬಾಗಲಕೋಟ ಅವರು ಉಪಸ್ಥಿತರಿದ್ದರು.

ಕನ್ನಡ ವಿಭಾಗದ ಮುಖ್ಯಸ್ಥ ಡಾ. ಮಲ್ಲಕಾರ್ಜುನ ಮೇತ್ರಿ ಸ್ವಾಗತಿಸಿದರು.

ಕುಮಾರಿ ಸಾನಿಯಾ ಮುಜಾವರ ರಾಜ್ಯೋತ್ಸವದ ಇತಿಹಾಸವನ್ನು ತಿಳಿಸಿದರು. ಕುಮಾರಿ ಶಿಲ್ಪಾ ಬಿರಾದಾರ ಹಾಗೂ ಕುಮಾರಿ ವೇದಾ ಪತ್ತಾರ ಕನ್ನಡಪರ ಗೀತೆಗಳನ್ನು ಹಾಡಿದರು. ಪ್ರೊ. ಶಾಂತಕುಮಾರ ಬಿಜಾಪುರ, ಪ್ರೊ. ವಿದ್ಯಾವತಿ ಬೆನ್ನೂರಮಠ ಅಭಿಪ್ರಾಯಗಳನ್ನು ಹಂಚಿಕೊಂಡರು. ಪ್ರೊ. ಆಯ್. ಈ. ಕೊಡೇಕಲಮಠ ವಂದಿಸಿದರು.

ಕು. ವೇದಾ ಪತ್ತಾರ ಕಾರ್ಯಕ್ರಮ ನಿರೂಪಿಸಿದರು ಕೊನೆಯಲ್ಲಿ ಕುಮಾರಿಯರಾದ ಆರಿಫಾ, ಸೌಮ್ಯ, ಅಕ್ಕವ್ವಾ ಹಾಗೂ ಸೋನಾಲಿ ರಾಷ್ಟ್ರಗೀತೆಯನ್ನು ಹಾಡಿದರು.

ಡಾ. ಎಸ್.ಎಚ್. ಮಲಘಾಣ, ಡಾ. ಎಲ್.ಆಯ್. ನದಾಫ, ಡಾ. ಮುಸ್ತಾಕ ಇನಾಮದಾರ, ಪ್ರೊ. ತೌಸಿಫ ಬಾಗವಾನ, ಪ್ರೊ. ಎಚ್.ಎಂ. ಖಾದ್ರಿ, ಡಾ. ಸಮೀಯುದ್ದೀನ, ಪ್ರೊ. ಮೇಘಾ ವಜ್ರಮಟ್ಟಿ, ಭೂಪಾಲ ಕುಲಕರ್ಣಿ, ಸೋಮು ಅಂಕಲಗಿ, ಸಲೀಮ ಕಲಾದಗಿ ಮುಂತಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಮಸೂತಿ ಬಾಲಕಿಯರ ಖೋಖೋ ರಾಜ್ಯಮಟ್ಟಕ್ಕೆ ಆಯ್ಕೆ



**ಕೊಲ್ಹಾರ :** ತಾಲೂಕಿನ ಮಸೂತಿ ಗ್ರಾಮದ ಶ್ರೀ ಗುರು ಸಂಗನಬಸವೇಶ್ವರ ವಜ್ರಮಹೋತ್ಸವ ಪ್ರೌಢಶಾಲೆಯ ಬಾಲಕಿಯರು ಆಲಮೇಲ ತಾಲೂಕು ಬಳಗಾನೂರ ಗ್ರಾಮದ ಗುರು ಕೇದಾರಲಿಂಗೇಶ್ವರ ಪ್ರೌಢಶಾಲೆ ಆವರಣದಲ್ಲಿ ಜರುಗಿದ ವಿಭಾಗ ಮಟ್ಟದ ಖೋ ಖೋ ಪಂದ್ಯಾವಳಿಯಲ್ಲಿ ಹಾವೇರಿ ತಂಡ ಸೋಲಿಸಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಮಸೂತಿ ಗ್ರಾಮದ ಬಾಲಕೀಯರ ಪ್ರಥಮ ಬಾರಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಕ್ಕೆ ಗ್ರಾಮದ ತಾಯಂದಿರು ಆರತಿ ಬೆಳಗಿ ಸ್ವಾಗತಗೈದರು. ಕ್ರೀಡಾಪಟುಗಳು,ದೈಹಿಕ ಶಿಕ್ಷಕರು ಹಾಗೂ ಹಾಗೂ ತರಬೇತಿದಾರರಿಗೆ ಗೌರವಿಸಿ ಸನ್ಮಾನಿಸಲಾಯಿತು. ಗ್ರಾಮದ ಪ್ರಮುಖ ಬೀದಿಗಳಲ್ಲಿ ತೆರೆದ ವಾಹನದಲ್ಲಿ ವಾದ್ಯಗಳಿಗೆ ಯುವಕಮಿತ್ರರು ನೃತ್ಯಗೈದು ಅದ್ದೂರಿ ಸ್ವಾಗತಕೋರಿ ಶುಭಹಾರೈಸಿದರು. ಜೆಸಿಬಿ ವಾಹನದ ಮೂಲಕ ಮಕ್ಕಳಿಗೆ ಪುಷ್ಪ ಹಾಕಿ ಮಕ್ಕಳಿಗೆ ಶುಭಹಾರೈಸಿದರು.ಗ್ರಾಮದ ಬಹುತೇಕ ಎಲ್ಲ ಯುವಕ ಮಿತ್ರರು,ತಾಯಂದಿರು ಗ್ರಾಮಸ್ಥರು ವಿಜಯೋತ್ಸವದಲ್ಲಿ ಭಾಗವಹಿಸಿ ಹಾರೈಸಿದರು ತಾಲೂಕು,ರಾಜ್ಯಮಟ್ಟಕ್ಕೆ ಆಯ್ಕೆ ಯಾಗಿ ಶಾಲೆ,ಗ್ರಾಮ,ಜಿಲ್ಲೆಯ ಕೀರ್ತಿ ಯನ್ನು ರಾಜ್ಯಮಟ್ಟದಲ್ಲಿ ಹೆಚ್ಚಿಸಿದ್ದಾರೆ ಎಂದು ದೈಹಿಕ ಶಿಕ್ಷಕ ಎಂ ಜಿ ಪಾಟೀಲ ಹರ್ಷ ವ್ಯಕ್ತಪಡಿಸಿದರು.ಮಕ್ಕಳಿಗೆ ವೀರೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು,ಗ್ರಾಮ ಪಂಚಾಯಿತಿ ಅಧ್ಯಕ್ಷ ಮುದಕಣ್ಣ ಹರಿಜನ ಹಾಗೂ ಸದಸ್ಯರು ವಿವಿದೊದ್ದೇಶ ಕೃಷಿ ಸಹಕಾರಿ ಸಂಘದ ಅಧ್ಯಕ್ಷ ಕೆ ವಿ ಕುಲಕರ್ಣಿ ಹಾಗೂ ಸದಸ್ಯರು ಹಾಗೂ ಶಾಲೆಯ ಮುಖ್ಯೋಪಾಧ್ಯಾಯ ಎಚ್ ಆರ್ ರಾಠೋಡ,ಸಿಬ್ಬಂದಿ ವರ್ಗ,ಗ್ರಾಮಸ್ಥರು,ಯುವಕಮಿತ್ರರು ಅಭಿನಂದಿಸಿದರು.

## ಪ್ರಸ್ತಾವಿತ ಸಕ್ಕರೆ ನಿಯಂತ್ರಣ ಕರಡು ಆದೇಶ ವಾಪಸ್ಸಿಗೆ ಆಗ್ರಹಿಸಿ ಕಬ್ಬು ಬೆಳೆಗಾರರ ಸಂಘ ಡಿಸಿಗೆ ಮನವಿ ಸಲ್ಲಿಕೆ




**ವಿಜಯಪುರ :** ಪ್ರಸ್ತಾವಿತ ಸಕ್ಕರೆ ನಿಯಂತ್ರಣ ಕರಡು ಆದೇಶ 2024ನ್ನು ವಾಪಸ್ ಪಡೆದು ಈಗಾಗಲೇ ಅಸ್ತಿತ್ವದಲ್ಲಿರುವ ಕಬ್ಬು ನಿಯಂತ್ರಣ ಆದೇಶ 1೯66 ಹಾಗೂ 5ಚಿ ಕಾಯ್ದೆಯನ್ನು ಮತ್ತಷ್ಟು ಬಲಪಡಿಸಿ ಸಮರ್ಪಕವಾಗಿ ಜಾರಿಗೊಳಿಸಲು ಆಗ್ರಹಿಸಿ ಕರ್ನಾಟಕ ಕಬ್ಬು ಬೆಳೆಗಾರರ ಸಂಘ ಜಿಲ್ಲಾಧಿಕಾರಿಗಳಿಗೆ ಗುರುವಾರ ಮನವಿ ಸಲ್ಲಿಸಿತು.

ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರಿಗೆ ಮತ್ತು ಸಂಸದ ರಮೇಶ ಜಿಗಜಿಣಗಿ ಅವರಿಗೆ ಮನವಿ ಸಲ್ಲಿಸಲಾಯಿತು.

ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಅಧ್ಯಕ್ಷ ಅಣ್ಣಾರಾಯ ಈಳಗೇರ ಮಾತನಾಡಿ, ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ನರೇಂದ್ರ ಮೋದಿ ಸರ್ಕಾರ ಕಬ್ಬು ಬೆಳೆಗಾರರ ಕೊರಳಿಗೆ ಉರುಲು ಹಾಕಲು ಹೊರಟಿದೆ. ಬಿಜೆಪಿಯ ಮೂಲ ನೀತಿಯಾದ ಬಂಡವಾಳ ಶಾಹಿಗಳ ಹಿತ ಕಾಪಾಡುವ ನಿಟ್ಟಿನಲ್ಲಿ 2024ರ ಪ್ರಸ್ತಾವಿತ ಸಕ್ಕರೆನಿಯಂತ್ರಣಕರಡುಆದೇಶವನ್ನುಜಾರಿ ಮಾಡಲು ಹೊರಟಿದೆ. ಈ ಕರಡು ನೀತಿಯ ಬಗ್ಗೆ ಕಬ್ಬು ಬೆಳೆಗಾರರ ಸಂಘ ಹಾಗೂ ರೈತ ಬಂಧುಗಳ ಜೊತೆ ಚರ್ಚೆ ನಡೆಸದೆ ಅವರ ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಸಕ್ಕರೆ ಕಾರ್ಖಾನೆಗಳು ಮತ್ತುರಾಜ್ಯಸರ್ಕಾರಗಳ ಸಂಬಂಧಿತ ಸಕ್ಕರೆ ಇಲಾಖೆಯ ಅಭಿಪ್ರಾಯಗಳ ಆಧಾರದ ಮೇಲೆ ನಿಲುವು ತೆಗೆದುಕೊಂಡಿರುವುದು ಖಂಡನೀಯ ಎಂದರು.

ಈಗಾಗಲೇಅಸ್ತಿತ್ವದಲ್ಲಿರುವಕಬ್ಬುನಿಯಂತ್ರಣ ಆದೇಶ 1೯66 ರಿಂದ ಕಬ್ಬು ಬೆಳೆಗಾರರಿಗೆ ಕೆಲವು ಪ್ರಯೋಜನಕಾರಿಯಾದ ನಿಬಂಧನೆಗಳನ್ನು ಕೇಂದ್ರ ಸರ್ಕಾರವು ಒಂದೊಂದಾಗಿ ಅಳಿಸುತ್ತಿರುವುದು ತಿಳಿಯುತ್ತದೆ. ಈಗಾಗಲೇ ಕಬ್ಬಿನ ರೈತರಿಗೆ ಸಕ್ಕರೆ ಕಾರ್ಖಾನೆಗಳಿಂದ ಬರುವ ಲಾಭದಲ್ಲಿ ಹೆಚ್ಚುವರಿ ಬೆಲೆಯನ್ನು ಪಡೆಯಲು ಅನುವು ಮಾಡಿಕೊಡುವ ಕಾಯ್ದೆಯಿಂದ ತೆಗೆದು ಹಾಕಲಾಗಿದೆ. ಕಬ್ಬು ರೈತರ ಹಿತಾಸಕ್ತಿಗಳನ್ನು ರಕ್ಷಿಸಲು ರಾಜ್ಯ ಸರ್ಕಾರಗಳು ರಾಜ್ಯ ಸಲಹೆ ಬೆಲೆಯನ್ನು ಘೋಷಿಸಿಸುವ ಕಬ್ಬು ನಿಯಂತ್ರಣ ಆದೇಶ 1೯66ರ ನಿಬಂಧನೆಗಳನ್ನು ಸರ್ಕಾರ ರದ್ದು ಮಾಡಲು ಹೊರಟಿದೆ. ಸಕ್ಕರೆ ಉದ್ಯಮಪತಿಗಳ ಹಿತ ಕಾಯಲು ಕೇಂದ್ರ ಸರ್ಕಾರದ ನರೇಂದ್ರ ಮೋದಿ ಸರ್ಕಾರ ಶೇ. 8.5ಕ್ಕೆ ಎಫ್‌ಆರ್‌ಪಿ ನಿಗದಿಯಾಗುತ್ತಿದದ್ದನ್ನು ಶೇ. 10.25 ಕ್ಕೆ ಸಕ್ಕರೆ ಇಳುವರಿಗೆ ಹೆಚ್ಚಿಸಿ ಎಫ್‌ಆರ್‌ಪಿ ನಿಗದಿ ಮಾಡಿದೆ. ಶೇ. 1.75 ಇಳುವರಿ ಪರ್ಸೆಂಟಿಗೆ 581 ಕಡಿಮೆಯಾಗುತ್ತದೆ. ಸಕ್ಕರೆ ಕಾರ್ಖಾನೆಗಳು ಸಕ್ಕರೆ ಮತ್ತು ಎಥೆನಾಲ್ ಇತ್ಯಾದಿಉತ್ಪನ್ನಗಳನ್ನುಮಾರಾಟಮಾಡಲು ಕೇಂದ್ರ ಸರ್ಕಾರ ಅನುಮತಿ ಪಡೆಯಬೇಕು ಎಂಬ ಷರತ್ತನ್ನು ಸಕ್ಕರೆ ನಿಯಂತ್ರಣ ಆದೇಶ 2024ರ ಮಸೂದೆಯಲ್ಲಿ ಸೇರಿಸಲಾಗಿದೆ. ಬ್ಯಾಂಕುಗಳಿಗೆ ಅಡಮಾನ ಇಟ್ಟಿರುವ ಸಕ್ಕರೆಯ ದಾಸ್ತಾನು ಮಾರಾಟ ಮಾಡಲು ಕೂಡ ಈ ಮಸೂದೆಯಲ್ಲಿ ಕೇಂದ್ರ ಸರ್ಕಾರದಿಂದ ಪೂರ್ವ ಅನುಮತಿ ಪಡೆಯುವ ಷರತ್ತನ್ನು ವಿಧಿಸಲಾಗಿದೆ ಎಂದು ಹೇಳಿದರು.

ಅಲ್ಲದೆ ಕಬ್ಬು ಬೆಳಗಾರರು ಸರಬರಾಜು ಮಾಡಿದ ಕಬ್ಬಿಗೆ 14 ದಿನದೊಳಗೆ ಹಣಪಾವತಿ ಮಾಡುವ ಕಡ್ಡಾಯ ಕಾನೂನು 1೯66 ರ ಕಾಯ್ದೆಯ ನಿಬಂಧನೆಯನ್ನು ರದ್ದು ಮಾಡುತ್ತಿದೆ. ಕಾರ್ಖಾನೆ ಮಾಲೀಕರು ತಾವು ನಿರ್ಧರಿಸಿದ ರೀತಿಯಲ್ಲಿ ರೈತರಿಗೆ ಹಣ ಪಾವತಿ ಮಾಡುವ ಅವಕಾಶವನ್ನು ನೀಡಿದೆ. ಇದು ದೇಶದ ಐದು ಕೋಟಿ ಕಬ್ಬು ಬೆಳೆಗಾರರ ಹಿತಾಸಕ್ತಿಗಳ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಎಂದರು.

ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಉಪಾಧ್ಯಕ್ಷ ಭೀಮರಾಯ ಪೂಜಾರಿ ಮಾತನಾಡಿ, ಈ ಕಾಯ್ದೆಯು ಒಕ್ಕೂಟ ವ್ಯವಸ್ಥೆಗೆವಿರುದ್ಧವಾಗಿದ್ದುರಾಜ್ಯಸರ್ಕಾರಗಳ ಹಕ್ಕುಗಳನ್ನು ಕಸಿದುಕೊಳ್ಳಬಹುದು ಮತ್ತು ಕೇಂದ್ರ ಸರ್ಕಾರಕ್ಕೆ ರಾಜ್ಯಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲು. ಸಕ್ಕರೆ ಮಾರಾಟಕ್ಕೂ ಪ್ರತಿ ತಿಂಗಳು ಮಾರಾಟದ ಪ್ರಮಾಣದ ನಿಗದಿ ಮಾಡುತ್ತದೆ. ಕೇಂದ್ರ ಸರ್ಕಾರ ತನಗೆ ಇಷ್ಟಬಂದ ಕಾರ್ಖಾನೆಗಳಿಗೆ ಮಾತ್ರ ಅನುಕೂಲ ಕಲ್ಪಿಸಿ ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಕಡೆಗಣಿಸಿ ರಾಜಕೀಯ ಕಾರಣದಿಂದ ತನ್ನ ಕಪಿಮುಷ್ಠಿಯಲ್ಲಿ ಹಿಡಿದಿಟ್ಟುಕೊಳ್ಳುತ್ತದೆ ಎಂದರು.

ಈ ಸಂದರ್ಭದಲ್ಲಿ ಗೋಪಾಲ ಶಿವಗದ್ದಿಗೆ, ಚಿದಾನಂದ ಬೆಳ್ಳಿನವರ, ಮಲ್ಲಿಕಾರ್ಜುನ ಸಾವುಕಾರ, ಪವಾಡಪ್ಪ ಸಾವುಕಾರ, ಸಿದ್ದಣ್ಣ ಗಡಗಿ, ಮಹೆಬೂಬ ಕಕ್ಕಳಮೇಲಿ, ಸೈಫನಸಾಬ ಬಾಗವಾನ, ಸಿದ್ದಣ್ಣ ಕುಂಬಾರ, ಮುರಿಗೆಪ್ಪ ಕೊಳಕಾರ, ಮಹಾಂತೇಶ ಶಿಂಗಾಡಿ, ಮಹಿಬೂಬ ಕಕ್ಕಳಮೇಲಿ ಮತ್ತಿತರರು ಉಪಸ್ಥಿತರಿದ್ದರು.

## ಉತ್ತಮ ಇಳುವರಿ ನಿರೀಕ್ಷೆಯಲ್ಲಿ ರೈತ: ತೊಗರಿಗೆ ಕಂದು ಬಣ್ಣ ಚುಕ್ಕೆ, ಮಂಜಿನ ಕಾಟಕ್ಕೆ ಕಮರಿದ ತೊಗರಿ



**ಇಂಡಿ :** ಬರದ ಸಮಸ್ಯೆ ಜೊತೆಗೆ ಮಂಜಿನ ಪ್ರಭಾವದಿಂದಾಗಿ ತಾಲೂಕಿನಲ್ಲಿ ತೊಗರಿ ಬೆಳೆ ಅಕ್ಷರಸ ಕಮರಿದೆ. ವಾಣಿಜ್ಯ ಬೆಳೆ ತೊಗರಿಗೆ ಈಗ ಮಂಜಿನ ಕಾಟ ಶುರುವಾಗಿದೆ.

ದಟ್ಟ ಮಂಜು ಕವಿಯುತ್ತಿದ್ದರಿಂದ ತೊಗರಿ ಬೆಳೆಯ ಮೇಲೆ ಪರಿಣಾಮ ಬೀರುತ್ತಿದೆ. ತೊಗರಿ ಮೊಗ್ಗುವಿನಿಂದ ಕೂಡಿದೆ. ಆದರೆ ಬೆಳಗ್ಗೆ ಮಂಜಿನ ವಾತಾವರಣದಿಂದ ಹೂ ಉದುರುವಿಕೆ, ಎಲೆ ಹಾಗೂ ಗಿಡದ ಮೇಲೆ ಕಂದು ಚುಕ್ಕೆ ಕಾಣಿಸಿಕೊಳ್ಳುತ್ತಿದ್ದರಿಂದ ಇಳುವರಿ ಕುಸಿಯುವ ಸಾಧ್ಯತೆಗಳಿವೆ ಎನ್ನುತ್ತಾರೆ ಕೃಷಿ ಇಲಾಖೆ ಅಧಿಕಾರಿಗಳು.

ತಾಲೂಕಿನಲ್ಲಿ ರೈತರು ಬೆಳೆಯುತ್ತಿದ್ದ ತೊಗರಿಗೆ ಪ್ರತಿ ವರ್ಷ ಉತ್ತಮ ಬೆಲೆ ಮಾರುಕಟ್ಟೆಯಲ್ಲಿ ದೊರೆಯುವದರಿಂದ ರೈತರು ಹೆಚ್ಚು ತೊಗರಿ ಬೆಳೆಯುತ್ತಿದ್ದಾರೆ. ತಾಲೂಕಿನ ಒಟ್ಟು ಒಂದು ಲಕ್ಷ 20 ಸಾವಿರ ಹೇಕ್ಟರ ಪ್ರದೇಶದಲ್ಲಿ ತೊಗರಿ ಬಿತ್ತನೆ ಮಾಡಲಾಗಿದೆ. ಆದರೆ ತೊಗರಿಗೆಹವಾಮಾನ ವೈಪರೀತ ಪೆಟ್ಟು ಕೊಡುತ್ತಿದೆ. ರಾತ್ರಿಯಿಂದಲೇ ಮಂಜು ಮುಸುಕಿದ ವಾತಾವರಣ ಸೃಷ್ಟಿಯಾಗುತ್ತಿದೆ. ನಸುಕಿನ ಜಾವ ಅಧಿಕವಾಗುವ ಮಂಜು ಬೆಳಗ್ಗೆ 8 ರ ವರೆಗೂ ಇರುತ್ತದೆ. ಇದರಿಂದ ಉಳಿದ ಬೆಳೆಗೂ ಮಂಜು ಕಂಟಕವಾಗಲಿದೆ ಎನ್ನುತ್ತಾರೆ ರೈತರು. ಮಂಜಿನಿಂದ ತೊಗರಿ ಮೊಗ್ಗಿನ ಕೊನೆಯ ಭಾಗ ಸುಟ್ಟಂತೆ ಆಗಲಿದೆ. ಇದರಿಂದ ಹಾನಿಯಾಗುವ ಸಾದ್ಯತೆ ಇದೆ.

## ಕನ್ನಡ ಭಾಷೆ ಸಂಸ್ಕೃತಿಯ ಬಗ್ಗೆ ನಿರ್ಲಕ್ಷ್ಯ ಧೋರಣೆ ಸರಿಯಲ್ಲ



**ಗುಳೇದಗುಡ್ಡ :** ಕರ್ನಾಟಕ ಎಂಬ ಹೆಸರು ನಾಮಕರಣ ಮಾಡಿ 50 ವರ್ಷಗಳಾದ ಕಾರಣ ರಾಜ್ಯ ಸರ್ಕಾರ ವರ್ಷ ಪೂರ್ತಿ ಕನ್ನಡ ಕಾರ್ಯಕ್ರಮ ಎಂದು ಘೋಷಣೆ ಮಾಡಿದೆ. ಆದರೆ ಗುಳೇದಗುಡ್ಡ ತಾಲೂಕಿನ ತಾಲೂಕು ಆಡಳಿತದ ಅಧಿಕಾರಿಗಳು ನಾಡ ಹಬ್ಬದ ಸಂಭ್ರಮವನ್ನು ನಿರ್ಲಕ್ಷ್ಯ ಮಾಡಿರುವುದು ವಿಷಾಧನೀಯವೆಂದು ಭಾಷಾನೀತಿ ತಜ್ಞರ ರಾಜ್ಯ ಸಮಿತಿ ಸದಸ್ಯ ಡಾ. ಸಣ್ಣವೀರಣ್ಣ ದೊಡ್ಡಮನಿ ತಮ್ಮ ವಿಷಾದ ವ್ಯಕ್ತಪಡಿಸಿದರು.

ಅವರು ತಹಸೀಲ್ದಾರರಿಗೆ ಮನವಿ ಸಲ್ಲಿಸಿ ಮಾತನಾಡಿ, ತಾಲೂಕು ಆಡಳಿತ ತನ್ನೆಲ್ಲ ಇಲಖೆಗಳ ಸಹಯೋಗದಲ್ಲಿ ನ.1 ರಂದು ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಶಾಲಾ, ಕಾಲೇಜು ವಿದ್ಯಾರ್ಥಿಗಳು,ಶಿಕ್ಷಕರು, ಕನ್ನಡಪರ ಸಂಘಟನೆಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ವಿಜ್ರಂಭಣೆಯಿಂದ ಆಚರಿಸದೇ ಕೇವಲ ನಾಡದೇವಿಯ ಭಾವಚಿತ್ರದ ಮೆರವಣಿಗೆ ಮಾಡಿ ಮುಗಿಸಿದ್ದು ಇಲ್ಲಿನ ಸಾಹಿತಿ, ಸಂಘಟಕರಿಗೆ ಬೇಸರವುಂಟು ಮಾಡಿದೆ. ತಾಲೂಕಿನ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಿಗೆ, ಸಾಲಾ ಮಕ್ಕಳ ಕನ್ನಡದ ವಿಷಯ ಕುರಿತಾದ ಚರ್ಚೆ, ಭಾಷಣ, ಪ್ರಬಂಧ, ಗೀತಗಾಯನ ಹೀಗೆ ಕಾರ್ಯಕ್ರಮ ಏರ್ಪಡಿಸಲಿಲ್ಲ. ಆಗಿರುವ ಪ್ರಮಾದ ಸರಿಪಡಿಸಿ ಇದೆ ತಿಂಗಳ 30 ರೊಳಗಾಗಿ ಒಂದು ದಿನ ತಾಲೂಕಿನ ಕನ್ನಡ ನುಡಿ ಸಡಗರವನ್ನು ಅದ್ದೂರಿಯಾಗಿ ಈ ಮೂಲಕವಾದರೂ ಆಚರಿಸಿ ನುಡಿಸೇವೆ ಮಾಡುವ ಶ್ರಮಿಕ ಕಲಾವಿದರಿಗೆ, ನುಡಿ ಸೇವೆ ಮಾಡುವ ತಜ್ಞರಿಗೆ ಗೌರವ ಸಲ್ಲಿಸಿದರೆ ತಮ್ಮ ಆಡಳಿತಕ್ಕೆ ಮೆರುಗು ಹೆಚ್ಚೆತ್ತದೆ ಎಂದರು.

ಹಿರಿಯ ಸಾಹಿತಿ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ನಿಕಟ ಪೂರ್ವ ಅಧ್ಯಕ್ಷ ಡಾ. ಸಿ. ಎಂ. ಜೋಶಿ ಮಾತನಾಡಿ, ನಮ್ಮ ತಾಲೂಕು ಪ್ರಾಚೀನ ಪರಂಪರೆ ಹೊಂದಿದೆ. ಇಲ್ಲಿನ ಕವಿ ಕಲಾವಿದರು ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸಿದ್ದಾರೆ. ಇಂತಹ ಸಾಂಸ್ಕೃತಿಕ ಹಿರಿಮೆ ಇರುವ ತಾಲೂಕು ಕೇಂದ್ರದಲ್ಲಿ ಅಧಿಕಾರಿಗಳು ಸಮರ್ಪಕವಾದ ನಿರ್ಧಾರ ತೆಗೆದುಕೊಳ್ಳದೆ ಕನ್ನಡ ಭಾಷೆ ಸಂಸ್ಕೃತಿಯ ಬಗ್ಗೆ ನಿರಾಭಿಮಾನಿಗಳಂತೆ ವರ್ತಿಸುತ್ತಿರುವುದು ವಿಷಾದದ ಸಂಗತಿ. ಈ ತಿಂಗಳು ಕನ್ನಡ ಸಂಭ್ರಮ ಜರುಗಿಸುವಂತೆ ಜವಾಬ್ದಾರಿ ವಹಿಸಬೇಕೆಂದು ಆಗ್ರಹಿಸಿದರು.

ತಹಸೀಲ್ದಾರರ ಮುಖಾಂತರ ಜಿಲ್ಲಾಧಿಕಾರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಿಗೆ, ಕಂದಾಯ ಇಲಾಖೆ ಸಚಿವರಿಗೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಮತ್ತು ರಾಜ್ಯ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಿಗೆ ಮನವಿ ರವಾನಿಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಎಚ್. ಎಸ್.ಘಂಟಿ, ಕಸಾಪ ಸದಸ್ಯರಾದ ಮಹಾದೇವ ಜಗತಾಪ, ಬಸವರಾಜ ಯಂಡಿಗೇರಿ, ಶೇಖರ ರಾಠೋಡ, ಕಿರಣ ಬಾಪ್ರಿ, ಮಹಾಲಿಂಗ ಯಂಡಿಗೇರಿ, ಕಜಾಪ ತಾಲೂಕು ಅಧ್ಯಕ್ಷ ಬಸವರಾಜ ಸಿಂದಗಿಮಠ, ಹುಚ್ಚೇಶ ಯಂಡಿಗೇರಿ, ಯಲ್ಲಪ್ಪ ಮನ್ನಿಕಟ್ಟಿ, ಪರಶು ಮಾದರ, ಗುಂಡಪ್ಪ ಕೋಟಿ ಸೇರಿದಂತೆ ಇನ್ನೂ ಅನೇಕರು ಇದ್ದರು.

## ಅಪ್ರೆಂಟಿಶಿಪ್ ತರಬೇತಿಗೆ ಪರಿಶಿಷ್ಟ ಜಾತಿ-ಪಂಗಡದ ಅಭ್ಯರ್ಥಿಗಳಿಂದ ಅರ್ಜಿ ಕರೆ

**ವಿಜಯಪುರ :** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿಯ ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆಯಡಿ ಪತ್ರಿಕೋದ್ಯಮದಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದ ಹಾಗೂ ಕಂಪ್ಯೂಟರ್ ಜ್ಞಾನಹೊಂದಿದ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ 12 ತಿಂಗಳ ಅಪ್ರೆಂಟಿಶಿಪ್ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ವಿಜಯಪುರ ಜಿಲ್ಲಾ ಕಚೇರಿಯಲ್ಲಿ ತಲಾ ಒಂದು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಅಪ್ರೆಂಟಿಶಿಪ್ ತರಬೇತಿಗೆ ಆಯ್ಕೆ ಮಾಡಲು ಅರ್ಜಿ ಆಹ್ವಾನಿಸಲಾಗಿದ್ದು, ತರಬೇತಿಗೆ ಮೆರಿಟ್ ಹಾಗೂ ಸಂದರ್ಶನ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾಧ್ಯಮ ಅಕಾಡೆಮಿ ಮೂಲಕ ತರಬೇತಿ ಭತ್ಯೆ ನೀಡಲಾಗುವುದು.

ಅಪ್ರೆಂಟಿಶಿಪ್ ತರಬೇತಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿದ ಅಗತ್ಯ ದಾಖಲೆಗಳೊಂದಿಗೆ ದಿನಾಂಕ: 30-11-2024ರೊಳಗೆ ಸಹಾಯಕ ನಿರ್ದೇಶಕರ ಕಚೇರಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ ಆವರಣ, ಸ್ಟೇಶನ್ ರಸ್ತೆ, ವಿಜಯಪುರ ಕಚೇರಿಗೆ ಸಲ್ಲಿಸಬೇಕು.

ನಿಗದಿತ ಅರ್ಜಿ ನಮೂನೆ ಹಾಗೂ ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿಯನ್ನು ಸಂಪರ್ಕಿಸುವಂತೆ ಸಹಾಯಕ ನಿರ್ದೇಶಕ ಅಮರೇಶ ದೊಡಮನಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರಾಜ್ಯದಲ್ಲಿ ವಕ್ಫ್ ಆಸ್ತಿ ಅತಿಕ್ರಮಣ, ಕಬಳಿಕೆ ತಡೆಗೆ ಆಗ್ರಹ



**ಸಿಂದಗಿ :** ರಾಜ್ಯದಲ್ಲಿ ವಕ್ಫ್ ಆಸ್ತಿಯನ್ನು ಅತೀಕ್ರಮಣ ಮತ್ತು ಕಬಳಿಕೆ ಮಾಡಿಕೊಂಡಿದ್ದು ವಕ್ಫ್ ಆಸ್ತಿಯನ್ನು ಉಳಿಸಿಕೊಳ್ಳಬೇಕೆಂದು ಟಿಪ್ಪು ಕ್ರಾಂತಿ ಸೇನಾ ರಾಜ್ಯ ಪ್ರಧಾನ ಕಾರ್ಯದರ್ಶಿ ದಸ್ತಗೀರ ಮುಲ್ಲಾ ಸರ್ಕಾರಕ್ಕೆ ಆಗ್ರಹಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು ವಕ್ಫ್ ಬಗ್ಗೆ ತಿಳುವಳಿಕೆ ಇಲ್ಲದ ವಕ್ಫ್ ಸಚಿವರು ಚುನಾವಣಾ ಪ್ರಚಾರಕ್ಕಾಗಿ ಬಂದು ವಕ್ಫ್ ಅದಾಲತ ಮಾಡುವದರ ಮುಖಾಂತರ ಗೊಂದಲ ಸೃಷ್ಟಿಸಿ ಸುಮ್ಮನಿರುವದು ನೋಡಿದರೆ ಸರ್ಕಾರನೇ ಸಾರ್ವಜನಿಕರ ಆಸ್ತಿ ಅತೀಕ್ರಮಣ ಮಾಡಿದ ಹಾಗೆ ಕಾಣುತ್ತಿದೆ.

1೯13ರಟ್ರಸ್ಟಿಆಕ್ಟ್‌ಮತ್ತು1೯13ರಮುಸಲ್ಮಾನ ವಕ್ಫ್ ವ್ಯಾಲಿಡೀಟಿ ಆಕ್ಟ್ ರಚಿಸಿ ಲಿಖಿತವಾಗಿ ಹಾಗೂ ಮೌಖಿಕವಾಗಿ ಧಾರ್ಮಿಕ ಸ್ಥಳಗಳಿಗೆ ಆಸ್ತಿಯನ್ನು ದತ್ತಿ ದಾನ ಅಂದರೆ ವಕ್ಫ್ ಮಾಡಬಹುದು ಎಂದು ಕಾನೂನು ರಚಿಸಲಾಯಿತು. ತದನಂತರ 1೯54 ರಲ್ಲಿ ವಕ್ಫ್ ಆಸ್ತಿಗಳ ರಕ್ಷಣೆ ಮತ್ತು ನಿರ್ವಹಣೆ ಮಾಡಲಿಕ್ಕೆವಕ್ಫ್‌ಕಾನೂನನ್ನುತರಲಾಯಿತು. ಕಾನೂನು ಮಾಡಿದ ನಂತರ 1೯65 ರಿಂದ 1೯70 ರವರೆಗೆ ವಕ್ಫ್ ಆಸ್ತಿಯನ್ನು ಸರ್ವೇ ಮಾಡಲಾಯಿತು ಇದಾದ ನಂತರ 1೯74 ರಲ್ಲಿ ಮುಂಬೈ ಕರ್ನಾಟಕ ವಕ್ಫ್ ಆಸ್ತಿಗಳನ್ನು ಗೆಜೆಟ್ಟನಲ್ಲಿ ನೋಂದಾಯಿಸಲಾಯಿತು. ಮತ್ತೆ 2020-21 ರಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮತ್ತೆ ವಕ್ಫ್ ಆಸ್ತಿಗಳನ್ನು ಗೆಜೆಟ್ಟನಲ್ಲಿ ನೋಂದಾಯಿಸಲಾಯಿತು.

ಆದರೆ ಇಂದು ರಾಜ್ಯದಲ್ಲಿ ನಡೆದಿರುವ ವಿದ್ಯಮಾನಗಳನ್ನು ನೋಡಿದರೆ ವಕ್ಫ್ ಆಸ್ತಿಯನ್ನು ಭೂಗಳ್ಳರು ಹಾಗೂ ಅತೀಕ್ರಮಣಕಾರರು ಕಬಳಿಸಿಕೊಂಡರೊ ? ಅಥವಾ ವಕ್ಫ್ ಬೋರ್ಡ್‌ನೇ ಸಾರ್ವಜನಿಕರ ಆಸ್ತಿ ಕಬಳಿಸಿಕೊಂಡಿತೋ ಎನ್ನುವುದು ಬಹಿರಂಗವಾಗಬೇಕಾಗಿದೆ.

ಅನಧಿಕೃತವಾಗಿ ವಕ್ಫ್ ಬೋರ್ಡ್ ಸಾರ್ವಜನಿಕರ ಮತ್ತು ರೈತರ ಆಸ್ತಿಯನ್ನು ಕಬಳಿಸಿಕೊಂಡಿದ್ದರೆ ಅನ್ಯಾಯಕ್ಕೆ ಒಳಗಾದವರು ವಕ್ಫ್ ಟ್ರಿಬಿನಲ್ ಕೋರ್ಟ್‌ನಲ್ಲಿ ಮೂಲ ದಾಖಲೆಗೊಳೊಂದಿಗೆ ಅರ್ಜಿ ಸಲ್ಲಿಸಿ ನ್ಯಾಯ ಪಡೆದು ಕೊಳ್ಳಲು ಅವಕಾಶ ಇದೆ. ಆದರೆ ವಕ್ಫ್ ಆಸ್ತಿಯನ್ನು ಭೂಗಳ್ಳರು ಅತೀಕ್ರಮಣಕಾರರು ಕಬಳಿಸಿಕೊಂಡರೆ ಸರ್ಕಾರ ಅಂಥವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಸರ್ಕಾರ ಶೀಘ್ರ ವಕ್ಫ್ ಆಸ್ತಿಯನ್ನು ಸರ್ವೆ ಮಾಡಿಸಿ ಹದ್ದುಬಸ್ತ ಮಾಡುವದರ ಮುಖಾಂತರ ವಕ್ಫ್ ಆಸ್ತಿಯನ್ನು ಉಳಿಸಿಕೊಳ್ಳಬೇಕು. ಸಾರ್ವಜನಿಕರಿಗೆ ರೈತರಿಗೆ ನಿಜವಾಗಿಯು ವಕ್ಫ್ ಇಲಾಖೆಯಿಂದ ತೊಂದರೆ ಆಗಿದ್ದರೆ ರಾಜ್ಯದಲ್ಲಿ ಸರ್ಕಾರ ನಿವೃತ್ತ ನ್ಯಾಯಮೂರ್ತಿಗಳ ನೇತ್ರತ್ವದ ಸಮಿತಿ ರಚಿಸಿ ರಾಜ್ಯದಲ್ಲಿ ಯಾರು ಯಾರ ಆಸ್ತಿಯನ್ನು ಕಬಳಿಸಿಕೊಂಡಿದ್ದಾರೆ ಎಂದು ವರದಿ ತಯಾರಿಸಿ ಸರ್ಕಾರಕ್ಕೆ ಒಪ್ಪಿಸಬೇಕು. ಅದನ್ನುಬಿಟ್ಟುವೋಟ್‌ಬ್ಯಾಂಕ್‌ರಾಜಕಾರಣ ಮಾಡುವದು ಸರಿ ಅಲ್ಲ.

ತಮ್ಮ ತಮ್ಮ ಪಕ್ಷದ ಭೂಗಳ್ಳರನ್ನು ಉಳಿಸುವ ಸಲುವಾಗಿ ಈ ರೀತಿಯ ತಪ್ಪು ಮಾಹಿತಿ ಸಾರ್ವಜನಿಕರಲ್ಲಿ ಮೂಡಿಸುವುದು ಸರಿಯಲ್ಲ. ಈ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದ ನಾಯಕರಿಗೇನಾದರೂ ನೈತಕತೆ ಇದ್ದರೆ ಅಲ್ಪಸಂಖ್ಯಾತ ಆಯೋಗದ ಮಾಜಿ ಅಧ್ಯಕ್ಷ ಅನ್ವರ್ ಮಾನಪಾಡಿಯವರ್ ವರದಿಯನ್ನು ಜಾರಿ ಮಾಡಲಿ ಮತ್ತು ಜಾರಿ ಮಾಡಿಸುವಸಲುವಾಗಿ ಹೋರಾಟ ಮಾಡಲಿ. ವಿಶೇಷವಾಗಿ ರಾಜ್ಯದಲ್ಲಿ ಬಿಜೆಪಿ ಪಕ್ಷದ ನಾಯಕರು ಜನರನ್ನು ದಾರಿತಪ್ಪಿಸಿವ ಕೆಲಸ ಹಾಗೂ ಕೋಮು ಭಾವನೆಗಳಿಗೆ ಧಕ್ಕೆ ತರುವ ಕೆಲಸ ಮಾಡಬಾರದು. ಒಟ್ಟಾರೆ ಸರ್ಕಾರ ವಕ್ಫ್ ಆಸ್ತಿಯನ್ನು ಉಳಿಸಿಕೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

# 2020ರ ಪುರಸಭೆ ಗಲಾಟೆ ಪ್ರಕರಣ: ಮರು ತನಿಖೆಗೆ ಕೋರ್ಟ್ ಆದೇಶ

* ಚಂದ್ರಶೇಖರ ಮೋರೆ.

**ಮಹಾಲಿಂಗಪುರ :** 2020 ನವೆಂಬರ್ 9ರಂದು ನಡೆದಿದ್ದ ಪುರಸಭೆಯ ಅಧ್ಯಕ್ಷ ಚುನಾವಣೆಯ (ಸ್ನೇಹಲ್ ಶಿವಾನಂದ ಅಂಗಡಿ ಅಧ್ಯಕ್ಷರಾಗಿ ಆಯ್ಕೆ) ಸಮಯದಲ್ಲಿ ಶಾಸಕ ಸಿದ್ದು ಸವದಿ ಹಾಗೂ ಬಿಜೆಪಿ ಸದಸ್ಯರು ಮೂವರು ಮಹಿಳಾ ಸದಸ್ಯೆಯರ ಎಳೆದಾಟ ಮತ್ತು ಗಲಾಟೆ ಪ್ರಕರಣವು ರಾಜ್ಯ, ದೇಶ, ವಿದೇಶದ ಗಮನ ಸೆಳೆದಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀಮತಿ ಚಾಂದನಿ ನಾಗೇಶ ನಾಯಕ ಅವರು ಮಹಾಲಿಂಗಪುರ ಠಾಣೆಯಲ್ಲಿ ಶಾಸಕ ಸಿದ್ದು ಸವದಿ ಸೇರಿ 31 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದರು. ಸದರಿ ಪ್ರಕರಣವು (ಎಂಎಲ್‌ಪಿ.ಪಿಎಸ್.ಸಿಆರ್ 107/2020) ಬನಹಟ್ಟಿ ಜೆಎಂಎಫ್‌ಸಿ ನ್ಯಾಯಾಲಯದಲ್ಲಿದೆ. ಇದಲ್ಲದೇ ಬಾಗಲಕೋಟೆ ಜಿಲ್ಲಾ ಸತ್ರ ನ್ಯಾಯಾಲಯದಲ್ಲಿ ಜಾತಿ ನಿಂದನೆಯ ಪ್ರತ್ಯೇಕ ಪ್ರಕರಣವನ್ನು ದಾಖಲಿಸಿದ್ದಾರೆ.

**ಸಿ.ಆಯ್.ಡಿ ವಿಚಾರಣೆ :**

ಪುರಸಭೆ ಗಲಾಟೆ ಪ್ರಕರಣವು ಸಿ.ಆಯ್.ಡಿ ಮೆಟ್ಟಿಲೇರಿದ್ದರಿಂದ 2021 ಜುಲೈ 2ಕ್ಕೆ ಮಹಾಲಿಂಗಪುರಕ್ಕೆ ಆಗಮಿಸಿದ್ದ ಸಿಆಯ್‌ಡಿ ವಿಚಾರಣೆಗಳ ವಿಭಾಗದ ಪೊಲೀಸ್ ಉಪಾಧೀಕ್ಷರಾದ ಸತ್ಯವತಿ ಎಸ್.ನೇತೃತ್ವದಲ್ಲಿ 5 ಜನ ಅಧಿಕಾರಿಗಳ ತಂಡವು 6 ದಿನಗಳ ಕಾಲ ಪುರಸಭೆ ಸದಸ್ಯರು, ಶಾಸಕ ಸಿದ್ದು ಸವದಿ ಅವರನ್ನು ವಿಚಾರಣೆ ನಡೆಸಿತ್ತು. ಆ ಸಮಯದಲ್ಲಿ ಶಾಸಕರು ಸೇರಿದಂತೆ ಎಲ್ಲರೂ ಜಾಮೀನು ಪಡೆದಿದ್ದರು. ನಂತರ ಪ್ರಕರಣದ ವಿಚಾರಣೆ ನಡೆಸಿದ ಸತ್ಯವತಿ ಅವರ ವರ್ಗಾವಣೆ, ಅವರ ಜಾಗಕ್ಕೆ ಬಂದ ಬೇರೆ ಅಧಿಕಾರಿಗಳಿಂದ ಮತ್ತೇ ವಿಚಾರಣೆ ನಡೆದಿತ್ತು. ಹಿಂದಿನ ಬಿಜೆಪಿ ಸರ್ಕಾರದ ಅವಧಿ(2023 ಜನವರಿ)ಯಲ್ಲಿ ಸಿಆಯ್‌ಡಿ ಅಧಿಕಾರಿಗಳು ಬಿ ರೀಪೋರ್ಟ್ ಹಾಕಿ ಪ್ರಕರಣ ವಜಾಗೊಳಿಸಿದ್ದರು.

**ಬಿ ರೀಪೋರ್ಟ್‌ಗೆ ಚಾಲೆಂಜ್ :**

ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಅಗತ್ಯ ದಾಖಲೆಗಳಿವೆ. ಸಿಆಯ್‌ಡಿ ಅಧಿಕಾರಿಗಳು ಸಮಗ್ರ ತನಿಖೆ ನಡೆಸಿದ್ದರು ಸಹ ಹಾಗೂ ದೂರದಾರು ನೀಡಿದ ಸಾಕ್ಷಾದಾರಗಳನ್ನು ಪರಿಗಣಿಸದೇ ತಮ್ಮ ಪ್ರಕರಣಕ್ಕೆ ಬಿ ರೀಪೋರ್ಟ್ ಹಾಕಿದ್ದನ್ನು ಪ್ರಶ್ನಿಸಿ ಪುರಸಭೆ ಸದಸ್ಯೆ ಶ್ರೀಮತಿ ಚಾಂದನಿ ನಾಗೇಶ ನಾಯಕ ಅವರು ಮತ್ತೇ ನ್ಯಾಯಾಲಯದ ಮೊರೆ ಹೋಗಿದ್ದರು. ನಾಯಕ ಅವರು ಸಲ್ಲಿರುವ



ಸಂಪೂರ್ಣ ಸಾಕ್ಷಾಧಾರಗಳನ್ನು ಪರಿಶೀಲಿಸಿ ಬನಹಟ್ಟಿ ಜೆಎಂಎಫ್‌ಸಿ ನ್ಯಾಯಾಲಯವು ದೂರುದಾರರ ಸಾಕ್ಷಿಗಳನ್ನು ಎತ್ತಿಹಿಡಿದು, ಸಿಆಯ್‌ಡಿ ಅಧಿಕಾರಿಗಳು ಹಾಕಿರುವ ಬಿ ರೀಪೋರ್ಟ್ ವಜಾಗೊಳಿಸಿ, ಸಿಆರ್ ಪಿಸಿ ಸೆಕ್ಷನ್ 153(3) ಅಡಿಯಲ್ಲಿ ನೀಡಲಾದ ಅಧಿಕಾರಗಳನ್ನು ಚಲಾಯಿಸಿ ಪ್ರಕರಣದ ಹೆಚ್ಚಿನ ಮರು ತನಿಖೆ ನಡೆಸಿ, 10 ಜನವರಿ 2025ರೊಳಗೆ ವರದಿಯನ್ನು ಸಮಗ್ರ ನೀಡಬೇಕೆಂದು ಸಂಬಂಧಿಸಿದ ಸಿಆಯ್‌ಡಿ ತನಿಖಾಧಿಕಾರಿಗೆ ಬನಹಟ್ಟಿ ಜೆಎಂಎಫ್‌ಸಿ ನ್ಯಾಯಾಲಯವು ಆದೇಶಿಸಿದೆ.

**ಈಗ ಮತ್ತೇ ಸಿಆಯ್‌ಡಿ ತನಿಖೆ? :**

ನ್ಯಾಯಾಲಯದ ಆದೇಶದ ಹಿನ್ನಲೆ ಸಿಆಯ್‌ಡಿ ಅಧಿಕಾರಿಗಳು ಶೀಘ್ರದಲ್ಲೆ ಮರು ತನಿಖೆ ಆರಂಭಿಸಿ, ಶಾಸಕ ಸವದಿ, ಪುರಸಭೆ ಸದಸ್ಯರು, ಬಿಜೆಪಿ ಮುಖಂಡರು ಸೇರಿದಂತೆ 31 ಜನರ ಮರು ವಿಚಾರಣೆ ನಡೆಸಲಿದ್ದಾರೆ. ಗಲಾಟೆಯಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ಸ್ನೇಹಲ್ ಅಂಗಡಿ ಅವರ 16 ತಿಂಗಳ ಅವಧಿ ಮುಗಿಸಿಕೊಂಡು (2022ರ ಮಾರ್ಚ) ಮನೆಗೆ ಹೋಗಿದ್ದಾರೆ. ನಂತರ ಇಲ್ಲಿಯವರೆಗೆ ಪುರಸಭೆಗೆ ಇಬ್ಬರು ಅಧ್ಯಕ್ಷರಾಗಿದ್ದಾರೆ. ಆದರೆ 2020ರ ಗಲಾಟೆ ಪ್ರಕರಣ ಮಾತ್ರ ಇನ್ನು ಅಂತ್ಯವಾಗಿಲ್ಲ.

**ಸದಸ್ಯರ ಅಳಲು :**

ಪುರಸಭೆಯ ಮಹಿಳಾ ಸದಸ್ಯೆಯರ ಎಳೆದಾಟ ಮತ್ತು ಗಲಾಟೆ ಪ್ರಕರಣ ನಡೆದು ಇದೇ ನವೆಂಬರ್ 9ಕ್ಕೆ ಭರ್ತಿ 4 ವರ್ಷಗಳಾದವು. ಇದರಲ್ಲಿ ಭಾಗವಹಿಸಿದರು ಕಳೆದ 4 ವರ್ಷಗಳಿಂದ ಧಾರವಾಡ, ಬಾಗಲಕೋಟೆ ಕೋರ್ಟ್‌ಗಳಿಗೆ, ಬಾಗಲಕೋಟೆ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ, ಬೆಂಗಳೂರು ಸಿಆಯ್‌ಡಿ ಆಫೀಸಗೆ ಅಲೆದಾಡುವದು ಮಾತ್ರ ತಪ್ಪಿಲ್ಲ. ಕೇಸ್ ಯಾವಾಗ ಮುಗಿಯುತ್ತದೆಯೋ ಗೊತ್ತಿಲ್ಲ, ನಮ್ಮ ಅಲೆದಾಡವು ತಪ್ಪಿಲ್ಲ ಎಂದು ಉಭಯ ಪಕ್ಷಗಳಲ್ಲಿನ ಕೆಲ ಮುಖಂಡರು, ಸದಸ್ಯರು ತಮ್ಮ ಅಳಲನ್ನು ತೋಡಿಕೊಳ್ಳುತ್ತಿದ್ದಾರೆ.

## ನ್ಯಾಯಾಲಯದ ಮೇಲೆ ನಂಬಿಕೆ ಇದೆ



ಪುರಸಭೆಯ 2020ರ ಗಲಾಟೆ ಪ್ರಕರಣಕ್ಕೆ ಸಂಬಂಧಿಸಿದ ಅಗತ್ಯ ದಾಖಲೆ ಮತ್ತು ಸಾಕ್ಷಾಧಾರಗಳು ನಮ್ಮ ಬಳಿ ಇವೆ. ತಡವಾದರೂ ಸಹ ನಮಗೆ ಖಂಡಿತಾ ನ್ಯಾಯ ಸಿಕ್ಕು ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತದೆ ಎಂಬ ವಿಶ್ವಾಸವಿದೆ. ನ್ಯಾಯಾಲಯದ ಮೇಲೆ ಅಪಾರ ನಂಬಿಕೆಯಿದೆ. ಶಾಸಕರು ಅಧಿಕಾರ ದುರುಪಯೋಗ ಮಾಡಿಕೊಂಡು ಪ್ರಕರಣಕ್ಕೆ ಬಿ ರೀಪೋರ್ಟ್ ಹಾಕಿಸಿದ್ದರು. ಆದರೆ ಇಂದು ನ್ಯಾಯಾಲಯವು ನಮ್ಮ ಸಾಕ್ಷೀಗಳನ್ನು ಪರಿಶೀಲಿಸಿ, ಪ್ರಕರಣದ ಮರು ತನಿಖೆಗೆ ಆದೇಶ ನೀಡಿದೆ. ನ್ಯಾಯ ಸಿಗುವರೆಗೂ ನಮ್ಮ ಕಾನೂನು ಹೋರಾಟ ಮುಂದುವರೆಯುತ್ತದೆ.

। ಶ್ರೀಮತಿ ಚಾಂದನಿ ನಾಗೇಶ ನಾಯಕ.
ಸದಸ್ಯರು ಪುರಸಭೆ.

---

ಅಲ್ಲಮಪ್ರಭುದೇವರ ನೂತನ ದೇವಸ್ಥಾನ ಲೋಕಾರ್ಪಣೆ ನಿಮಿತ್ತ ಆರು ಸಾವಿರ ಮಹಿಳೆಯರಿಂದ ವಚನಗಳ ಬೃಹತ್ ಮೆರವಣಿಗೆ

# ಆನೆ ಅಂಬಾರಿ ಮೇಲೆ ಅಲ್ಲಮನ ಭಾವಚಿತ್ರದ ಮೆರವಣಿಗೆ





**ತೇರದಾಳ :** ಭಕ್ತರ ದೇಣಿಗೆ ಹಣದಿಂದಲೇ ನಿರ್ಮಾಣಗೊಂಡ ತೇರದಾಳ ಕ್ಷೇತ್ರಾಧಿಪತಿ ಅಲ್ಲಮಪ್ರಭು ದೇವರ ನೂತನ ದೇವಸ್ಥಾನ ಲೋಕಾರ್ಪಣೆ ನಿಮಿತ್ತ ಶನಿವಾರ ಸಂಜೆ ಅಲ್ಲಮಪ್ರಭುದೇವರು ಬರೆದ ವಚನ ಗ್ರಂಥಗಳನ್ನು ಆರು ಸಾವಿರ ಮಹಿಳೆಯರು ತಲೆಯ ಮೇಲೆ ಹೊತ್ತುಕೊಂಡು ಪಟ್ಟಣದಲ್ಲಿ ಬೃಹತ್ ಮೆರವಣಿಗೆ ನಡೆಸಿದರು.

ರಬಕವಿ ರಸ್ತೆಯ ನೀಲಕಂಠೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡ ಮೆರವಣಿಗೆ, ಪೊಲೀಸ್ ಠಾಣೆ, ಮಹಾವೀರ ವೃತ್ತ, ಬಸ್ ನಿಲ್ದಾಣ, ವಿಶೇಷ ತಹಸೀಲ್ದಾರ್ ಕಚೇರಿ, ಚಾವಡಿ ವತ್ತ, ಕನ್ನಡ ಶಾಲೆ, ದ್ವಾರ ಬಾಗಿಲು ಮುಖಾಂತರ ಅಲ್ಲಮಪ್ರಭುದೇವರ ದೇವಸ್ಥಾನ ತಲುಪಿತು. ಆನೆಯ ಮೇಲೆ ಅಂಬಾರಿ, ಅಂಬಾರಿಯೊಳಗೆ ವಚನಗಳ ಗಾರೂಢಿಗ ಅಲ್ಲಮಪ್ರಭುದೇವರ ಭಾವಚಿತ್ರ ಇಟ್ಟುಕೊಂಡು ನಡೆದ ಮೆರವಣಿಗೆ ಮೈಸೂರು ದಸರಾ ಕಳೆ ನೆನಪಿಸಿತು. ಕೇಸರಿ, ಗುಲಾಬಿ, ಹಸಿರು, ಹಳದಿ, ಕೆಂಪು, ನೀಲಿ, ಬೂದಿ ಬಣ್ಣ ಬಣ್ಣದ ಸೀರೆಗಳನ್ನು ಉಟ್ಕೊಂಡು ತಲೆ ಮೇಲೆ ಗ್ರಂಥಗಳನ್ನು ಹೊತ್ತುಕೊಂಡ ಮಹಿಳೆಯರ ಇರಿವೆಯಂತ ಸಾಲು ನೋಡುಗರ ಮನವನ್ನು ರೋಮಾಂಚನಗೊಳಿಸಿತು. ಆನೆ ಒಂಟೆ, ಕುದರೆ ಉತ್ಸವದಲ್ಲಿ ಮೆರಗು ನೀಡಿದವು.

ದಾರಿಯುದ್ಧಕ್ಕೂ ಬಿಡಿಸಿದ ಬಣ್ಣ ಬಣ್ಣದ ರಂಗೋಲಿ ವಚನೋತ್ಸವಕ್ಕೆ ಸ್ವಾಗತ ಕೋರಿದವು. ನೀಡಿತು. ಚಂಡಿ ಮೇಳ, ಪುರವಂತರು, ವೀರಗಾಸೆ, ಡೊಳ್ಳು, ಸಾಂಬಾಳ, ಕರಡಿ ಮೇಳ ಝಾಂಜ್ ವಾದ್ಯಮೇಳಗಳು ಉತ್ಸವದ ಸೊಬಗು ಹೆಚ್ಚಿಸಿದವು. ಸುಮಾರು ಗಂಟೆಗೂ ಅಧಿಕ ನಡೆದ ಭವ್ಯ ಮೆರವಣಿಗೆಯಲ್ಲಿ ಪುರುಷರು ಕೂಡ ಜುಬ್ಬಾ ಬಟ್ಟೆ ಧರಿಸಿ ತಲೆ ಮೇಲೆ ವಚನ ಪುಸ್ತಕ ಹೊತ್ತುಕೊಂಡು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಶೇಗುಣಸಿಯ

ಡಾ. ಮಹಾಂತಪ್ರಭು ಶ್ರೀ, ಚಿಮ್ಮಡದ ಪ್ರಭು ಶ್ರೀ, ಗಂಗಾಧರ ದೇವರು,

ವಿರುಪಾಕ್ಷ ದೇವರು, ಶಾಸಕ ಜಗದೀಶ ಗುಡಗುಂಟಿಮಠ, ಸಿದ್ದು ಸವದಿ ಸೇರಿದಂತೆ ಸುಮಾರು ಹತ್ತು ಸಾವಿರದಷ್ಟು ಭಕ್ತರು ವಚನೋತ್ಸವದ ಮೆರವಣಿಗೆಗೆ ಸಾಕ್ಷಿಯಾದರು.

---

# ಸಮೀರವಾಡಿ ಕಾರ್ಖಾನೆ : ಪ್ರತಿ ಟನ್‌ಗೆ 3 ಸಾವಿರ ದರ ಘೋಷಣೆ
# 2024-25ನೇ ಸಾಲಿನ ಹಂಗಾಮಿನ ಕಬ್ಬು ನುರಿಸುವಿಕೆಗೆ ಚಾಲನೆ



**ಮಹಾಲಿಂಗಪುರ :** 2024-25ನೇ ಸಾಲಿನ ಕಬ್ಬು ನುರಿಸುವಿಕೆ ಹಂಗಾಮಿನಲ್ಲಿ ಸಮೀರವಾಡಿಯ ಗೋದಾವರಿ ಕಾರ್ಖಾನೆಯಿಂದ ಪ್ರತಿಟನ್‌ಗೆ 3 ಸಾವಿರ ದರ ನಿಗದಿಪಡಿಸಲಾಗಿದೆ ಎಂದು ಕಾರ್ಖಾನೆಯ ಮುಖ್ಯ ಕಾರ್ಯನಿರ್ವಾಹಕ ನಿರ್ದೇಶಕ ಬಿ.ಆರ್.ಭಕ್ಷಿ ಹೇಳಿದರು.

ಶನಿವಾರ ಕಾರ್ಖಾನೆಯ ಕೇನ್ ಯಾರ್ಡನ ಆವರಣದಲ್ಲಿ ಜರುಗಿದ 2024-25ನೇ ಸಾಲಿನ ಕಬ್ಬು ನುರಿಸುವಿಕೆಯ ಹಂಗಾಮಿನ ಚಾಲನೆ, ಹೋಮ-ಹವನ ಪೂಜಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು ಪ್ರತಿವರ್ಷದಂತೆ ರೈತರು ಕಾರ್ಖಾನೆಗೆ ಸಹಕಾರ ನೀಡಬೇಕು. ಪ್ರಸಕ್ತ ವರ್ಷ ದಾಖಲೆಯ 28-29 ಲಕ್ಷ ಟನ್ ಕಬ್ಬು ನುರಿಸುವ ಗುರಿಯನ್ನು ಹೊಂದಿದೆ. ಎಲ್ಲಾ ರೈತರು, ಕಾರ್ಮಿಕರು, ಕಾರ್ಖಾನೆಯ ಅಧಿಕಾರಿಗಳು ಸಹಕಾರ ನೀಡಬೇಕು ಎಂದರು.

ಗಣ ಹೋಮ-ಹವನ ನಡೆಸಿ, ಕಬ್ಬು ತುಂಬಿದ ಎತ್ತಿನ ಗಾಡಿ ಮತ್ತು ಎತ್ತುಗಳಿಗೆ ಪೂಜೆ ಸಲ್ಲಿಸಿ ಕಬ್ಬು ನುರಿಸುವ ಹಂಗಾಮಿಗೆ ರೈತರ ಮೂಲಕ ಚಾಲನೆ ನೀಡಲಾಯಿತು. ಪ್ರಸಕ್ತ ವರ್ಷದ ಹಂಗಾಮಿನಲ್ಲಿ ವಯೋನಿವೃತ್ತಿಯಾಗಲಿರುವ ನೌಕರರನ್ನು ದಂಪತಿ ಸಮೇತ ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಖಾನೆಯ ಅಧಿಕಾರಿಗಳಾದ ಎಂ.ರಾಮಚಂದ್ರ, ವಿಜಯಕುಮಾರ ಕಣವಿ, ರಾಮಚಂದ್ರ ಸೋನವಾಲ್ಕರ್, ದಿನೇಶ ಶರ್ಮಾ, ರಾಜು ಶೆಟ್ಟರ, ಮಜದ್ದೂರ ಯುನಿಯನ್ ಅಧ್ಯಕ್ಷ ಬಸವರಾಜ ಪೂಜಾರಿ, ಎಸ್‌ಓಸಿ ಅಧ್ಯಕ್ಷ ಬಸವರಾಜ ಭದ್ರಶೆಟ್ಟಿ, ಡಿ.ಎನ್.ಪಾಟೀಲ್, ರೈತ ಮುಖಂಡರಾದ ರಾಮನಗೌಡ ಪಾಟೀಲ, ರಂಗನಗೌಡ ಪಾಟೀಲ, ಬಿ.ಜಿ.ಹೊಸೂರ, ಲಕ್ಷ್ಮಣ ಹುಚ್ಚರಡ್ಡಿ, ಮಹಾದೇವ ನಾಡಗೌಡ, ರಾಮಣ್ಣ ಮಳಲಿ, ಬುಜಬುಲಿ ಕೆಂಗಾಲಿ, ಈರಪ್ಪ ಕನಕರಡ್ಡಿ, ಮಹಾದೇವ ಮಾರಾಪೂರ, ಮಲ್ಲಿಕಾರ್ಜುನ ಖಾನಗೌಡರ, ಡಾ.ಮಾಧವ ಭಕ್ಷಿ, ಮಹಾಲಿಂಗಪ್ಪ ಸನದಿ, ಪ್ರಕಾಶ ಚನ್ನಾಳ, ಕೆ.ಟಿ.ಪಾಟೀಲ, ರವಿ ಬ್ಯಾಳಿ, ಶಿವಲಿಂಗ ಕೌಜಲಗಿ, ಭೀಮಶಿ ಮಗದುಮ್, ಮಲ್ಲಪ್ಪ ಗುರವ, ಯಮನು ಉಪ್ಪಾರ, ಬಸವರಾಜ ಮುಕುಂದ, ವಿಠ್ಠಲ ಹೊಸಮನಿ, ಬಸವಂತ ಕೋಟೆ, ಆರ್.ಟಿ.ಬುದ್ನಿ, ಸದಾಶಿವ ಕಂಬಳಿ, ರಾಮನಗೌಡ ಪಾಟೀಲ ಸೇರಿದಂತೆ ಬಾಗಲಕೋಟೆ-ಬೆಳಗಾವಿ ಜಿಲ್ಲೆಗಳ ವಿವಿಧ ಊರಿನ ಸಾವಿರಾರು ರೈತರು ಇದ್ದರು.

---

# ಸಂಭ್ರಮದ ರಘುನಾಥ ಮಹಾರಾಜರ ಜಲ-ರಥೋತ್ಸವ



**ಚಿಮ್ಮಡ :** ಗ್ರಾಮದ ಶ್ರೀ ರಘುನಾಥ ಪ್ರೀಯ ಸಾಧು ಮಹಾರಾಜರ ಜಾತ್ರಾ ಮಹೋತ್ಸವ ರಥೋತ್ಸವ ಹಾಗೂ ಜಲ-ರಥೋತ್ಸವವು ಬುಧವಾರ ರಾತ್ರಿ ಸಡಗರ ಸಂಭ್ರಮದೊಂದಿಗೆ ವಿಜ್ರಂಭನೆಯಿಂದ ಜರುಗಿತು.

ಮೂರು ದಿನಗಳ ಕಾಲ ನಡೆದ ಜಾತ್ರಾ ಮಹೋತ್ಸವದ ನಿಮಿತ್ಯ ನಡೆದ ವಿಶೇಷ ಆರಾಧನೆ, ವಿವಿಧ ಕಾರ್ಯಕ್ರಮಗಳಲ್ಲಿ ಬಿಜಾಪೂರ ಬಾಗಲಕೋಟ ಬೇಳಗಾವಿ ಜಿಲ್ಲೆಗಳಲ್ಲದೇ ನೆರೆಯ ಮಹಾರಾಷ್ಟ್ರದಿಂದ ಸಾವಿರಾರು ಜನ ಭಕ್ತಾದಿಗಳು ಆಗಮಿಸಿ ರಥೋತ್ಸವದಲ್ಲಿ ಪಾಲ್ಗೊಂಡು ಭಕ್ತಿಭಾವದಿಂದ ಪಾರಾಯಣ ಪಠಿಸಿದರು, ಮಹಾರಾಷ್ಟ್ರದಿಂದ ಆಗಮಿಸಿದ ತಂಡ ಗ್ರಾಮದ ಪ್ರಮುಖ ಬೀದಿಯ ಹಲವಾರು ಸ್ಥಳಗಳಲ್ಲಿ ಬ್ರಹತ್ ರಂಗೋಲಿ ಬಿಡಿಸುವ ಮೂಲಕ ಜಾತ್ರೆಗೆ ವಿಶೇಷ ಕಳೆ ನೀಡಿದರು ಶ್ರೀಮಠದ ಬಾವಿಯಲ್ಲಿ ನಡೆಯುವ ಶ್ರೀರಘುನಾಥ ಪ್ರೀಯ ಸಾಧು ಮಹಾರಾಜರ "ಜಲ ರಥೋತ್ಸವ" ವೀಕ್ಷಿಸಿದ ಸಾವಿರಾರು ಜನ ಭಕ್ತಾಧಿಗಳು ತಮ್ಮ ಹರಕೆಯಂತೆ ದೀಪ ಬೆಳಗಿಸುವ ಮೂಲಕ ಭಕ್ತಿಪರವಶರಾದರು.

ರಾತ್ರಿ ಗ್ರಾಮದ ಪಿಕೆಪಿಎಸ್ ಆವರಣದಲ್ಲಿ ಅರುಣೋದಯ ಗ್ರಾಮಿಣಾಭಿವೃದ್ಧಿ ಸಂಸ್ಥೆಯಿಂದ ಹಮ್ಮಿಕೊಳ್ಳಲಾಗಿದ್ದ "ಅರುಣೋತ್ಸವ" ಕಾರ್ಯಕ್ರಮದಲ್ಲಿ ಝೀ ಕನ್ನಡವಾಹಿನಿಯ ಕಾಮಿಡಿ ಕಿಲಾಡಿಗಳು ವಿಜೇತ ಹರೀಶ ಹಿರಿಯೂರು, ಜಗ್ಗಪ್ಪ ಬೆಂಗಳೂರು ಜನಪ್ರೀಯ ಕಿರುತೆರೆ ಹಾಗೂ ಯೂಟ್ಯುಬ್ ಸ್ಟಾರ ಜನಪದ ಕಲಾವಿದರಾದ ಬಾಳು ಬೆಳಗುಂದಿ, ಮ್ಯುಸಿಕ್ ಮೈಲಾರಿ, ಜನಪದ ಗಾಯಕಿ ತೃಪ್ತಿ ಧಾರವಾ, ಸುಶ್ಮಿತಾ ಬೆಂಗಳೂರು, ವಿಕೆ ಸ್ಟೈಲ್ ಡಾನ್ಸ ಗ್ರುಪ್, ಮತ್ತು ಶಿವಾ ಡಾನ್ಸ ಗ್ರುಪ್‌ನಿಂದನೆರೆದಅಭಿಮಾನಿಗಳು ಜನಪದ ಹಾಡು, ವಿವಿದ ನೃತ್ಯ ನೀರೂಪಕ ಕಾಮಿಡಿ ಸ್ಕಿಡ್‌ಗಳ ಮೂಲಕ ಮನರಂಜನೆಯ ರಸದೌತನ ಸವಿದರು. ಇಲ್ಲಿನ ಚನ್ನಮ್ಮ ವೃತ್ತದಲ್ಲಿ ಬಸವೇಶ್ವರ ಯುವಕ ಮಂಡಳ ಹಾಗೂ ಗೆಳೆಯರ ಬಳಗ ಹಮ್ಮಿಕೊಂಡಿದ್ದ ರಾಜ್ಯದ ಪ್ರಸಿದ್ದ ಯೂಟ್ಯುಬ್ ಕಲಾವಿದರಿಂದ ಜನಪದ ಸಂಗೀತ ರಸಮಂಜರಿ ಹಾಗೂ ನಗೆ ಚಟಾಕಿ ಕಾರ್ಯಕ್ರಮ ನೆರೆದ ಜನರನ್ನು ಮಸೂರೆಗೊಳಿಸಿತು.

ಪ್ರಭುಲಿಂಗೇಶ್ವರ ಯುವಕರ ಕಬ್ಬಡ್ಡಿ ಕ್ರೀಢಾ ಸಂಘದಿಂದ ಕಬ್ಬಡ್ಡಿ ವೈಭವ 2025 ಬಾಗಲಕೋಟ ಜಿಲ್ಲಾ ಕಬ್ಬಡ್ಡಿ ಚಾಂಪಿಯನ್ ಟ್ರೋಫಿ ಹಮ್ಮಿಕೊಳ್ಳಲಾಗಿತ್ತು, ಅಲ್ಲದೇ ಸಾಂಸ್ಕೃತಿಕ ಸ್ಪರ್ದಾ ಕಾರ್ಯಕ್ರಮಗಳಾದ ಸಂಗ್ರಾಮ ಕಲ್ಲು ಮೇಲೆ ನೆಟ್ಟಗೆ ಎತ್ತುವ ಸ್ಪರ್ದೆ ಹಾಗೂ ಅಂತರ್ರಾಷ್ಟ್ರೀಯ ಕುಸ್ತಿ ಪಂದ್ಯಾವಳಿಗಳನ್ನು ಹಮ್ಮಿಕೊಳ್ಳಲಾಗಿತ್ತು.

ವಿವಿಧ ಕಾರ್ಯಕ್ರಮಗಳಲ್ಲಿ ಸ್ಥಳಿಯ ವಿರಕ್ತಮಠದ ಶ್ರೀ ಪ್ರಭು ಮಹಾಸ್ವಾಮಿಗಳು, ರಘುನಾಥ ಪ್ರೀಯ ಸಾಧು ಮಹಾರಾಜರ ಮಠದ ಶ್ರೀ ಜನಾರ್ಧನ ಮಹಾರಾಜರು ಸಾನಿಧ್ಯ ವಹಿಸಿದ್ದರು,

ಬಂಡಿಗಣಿ ನೀಲಮಾನಿಕ ಮಠದ ಶ್ರೀ ಅನ್ನದಾನೇಶ್ವರರು, ಶಾಸಕ ಸಿದ್ದು ಸವದಿ, ಕಾಂಗ್ರೆಸ್ ಧುರೀಣ ಸಿದ್ದು ಕೊಣ್ಣೂರ ಸೇರಿದಂತೆ ವಿವಿಧ ರಾಜಕೀಯ ಧುರೀಣರು ಹಿರಿಯ ಅಧಿಕಾರಿಗಳು ಸೇರಿದಂತೆ ಹಲವಾರು ಜನ ಗಣ್ಯರು ಆಗಮಿಸಿದ್ದರು. ಬನಹಟ್ಟಿ ಠಾಣಾಧಿಕಾರಿ ಶ್ರೀಮತಿ ಶಾಂತಾ ಹಳ್ಳಿ ಸೂಕ್ತ ಬಂದೋಬಸ್ತ ಎರ್ಪಡಿಸಿದ್ದರು. ಸರ್ವ ಧರ್ಮಿಯರು ಪಾಲ್ಗೊಂಡು ಸಂಭ್ರಮಿಸಿದ ಜಾತ್ರಾ ಮಹೋತ್ಸವದಲ್ಲಿ ದೀಪೋತ್ಸವ ಹಾಗೂ ವಿವಿಧ ಮಾದರಿಯ ಆಧುನಿಕ ಪಟಾಕಿಸಿಡಿಸುವುದು ಹಾಗೂ ಆಕಾಶಬುಟ್ಟಿ ಗಾಳಿಯಲ್ಲಿ ತೇಲಿಬಿಡುವುದು ಆಕರ್ಷನೀಯವಾಗಿತ್ತು.

---

# ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಉದ್ಘಾಟನೆಗೆ ಚಾಲನೆ



**ಕೊಪ್ಪಳ :** ತಾಲೂಕಿನ ಕಿನ್ನಾಳ ಗ್ರಾಮದ ಸರಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಪ್ರೌಢಶಾಲೆ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕೊಪ್ಪಳ, ಸರಕಾರಿ ಪ್ರೌಢಶಾಲೆ ಕಿನ್ನಾಳ, ಜಿಲ್ಲಾ ವಕೀಲರ ಸಂಘ ಕೊಪ್ಪಳ ಇವುಗಳ ಸಂಯುಕ್ತ ಆಶ್ರಯದಲ್ಲಿ ನವೆಂಬರ್ 9ರ ಶನಿವಾರದಂದು ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆ ಕಾರ್ಯಕ್ರಮ ಜರುಗಿತು,

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿ ಕಾರದ ಅಧ್ಯಕ್ಷರಾಗಿರುವ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಸಿ ಚಂದ್ರಶೇಖರ್ ಅವರು ಉದ್ಘಾಟನೆ ನೆರವೇರಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ ಕಾನೂನು ಸೇವೆಗಳ ಪ್ರಾಧಿಕಾರ ದಿಂದ ಸಾರ್ವಜನಿಕರಿಗೆ ಕಾನೂನು ಸೇವೆಗಳ ಸೌಲಭ್ಯ ಪಡೆದುಕೊಳ್ಳಬಹುದು ಇಂತಹ ಕಾರ್ಯಕ್ರಮ ಗಳ ಸದ್ಬಳಕೆ ಮಾಡಿಕೊಳ್ಳಬೇಕು. ಎಂದು ಅವರು ಸಲಹೆ ನೀಡಿದರು,

ಸಮಾರಂಭದಲ್ಲಿ ಕಿನ್ನಾಳ ಗ್ರಾಮದ ಸರಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ವಾಸುದೇವ ಆಡಬಾವಿ, ಕಿನ್ನಾಳ ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಕರಿಯಮ್ಮ ಉಪ್ಪಾರ್ ಸರಕಾರಿ ಪ್ರೌಢ ಶಾಲೆಯ ಉಪಪ್ರಚಾರ್ಯರಾದ ಶ್ರೀಮತಿ ಕಸ್ತೂರಿ ಕಡೆಮನಿ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಪರಮೇಶ್ವರಯ್ಯ ತೆಳಗಡೆ ಮಠ, ಎಸ್ ಡಿ ಎಮ್ ಸಿ ಅಧ್ಯಕ್ಷರಾದ ಪರಶುರಾಮ್ ಎಲೆಡಿಕಿ, ಉಪಾಧ್ಯಕ್ಷರಾದ

ಶ್ರೀಮತಿ ಸುಮ ಲತಾ ಸಜ್ಜನ್, ಗ್ರಾಮ ಪಂಚಾಯತ್ ಸದಸ್ಯರಾದ ಪ್ರಶಾಂತ್ ಕುಲಕರ್ಣಿ ಮತ್ತು ಸಣೆಪ್ಪ ಕಾರಬ್ಯಾಳಿ ಸೇರಿದಂತೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸರ್ವ ಸದಸ್ಯರು ಹಾಗೂ ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳ ಪಾಲಕರು ಪಾಲ್ಗೊಂಡಿದ್ದರು,

---

# ದೇಶದ ಮಹಾನ್ ನಾಯಕರ ಆದರ್ಶ ಪಾಲಿಸಬೇಕು: ಖಯ್ಯುಮ್



**ಕೊಪ್ಪಳ :** ನಮ್ಮ ಭಾರತ ದೇಶದ ಸ್ವತಂತ್ರಕ್ಕಾಗಿ ಹೋರಾಡಿದ ಮಹಾನ್ ನಾಯಕರ ಆದರ್ಶಗಳನ್ನು ಈ ದೇಶದ ಪ್ರತಿಯೊಬ್ಬ ನಾಗರಿಕರು ಪಾಲಿಸಬೇಕು ಅವರು ಹಾಕಿಕೊಟ್ಟ ಮಾರ್ಗದಲ್ಲಿ ಜೀವನ ಸಾಗಿಸಬೇಕು ಎಂದು ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರಭಾರಿ ಪ್ರಾಚಾರ್ಯರಾದ ಎಂ ಎ ಖಯ್ಯುಮ್ ಹೇಳಿದರು,

ಅವರು ಸೋಮವಾರ ಬೆಳಿಗ್ಗೆ ನಗರದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಸರ್ಕಾರಿ ಉರ್ದು ಮತ್ತು ಕನ್ನಡ ಪ್ರೌಢಶಾಲಾ ವಿಭಾಗದಲ್ಲಿ ಏರ್ಪಡಿಸಿದ ಮೌಲಾನ ಅಬುಲ್ ಕಲಾಂ ಆಜಾದ್ ರವರ ಜಯಂತಿ ಪ್ರಯುಕ್ತ ಏರ್ಪಡಿಸಿದ ಸಮಾರಂಭವನ್ನು ಆಜಾದ್ ರವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು,

ಮೌಲಾನ ಅಬುಲ್ ಕಲಾಂ ಆಜಾದ್ ರವರು ನಮ್ಮ ಭಾರತ ದೇಶದ ಪ್ರಪ್ರಥಮ ಶಿಕ್ಷಣ ಮಂತ್ರಿ ಯಾಗಿದ್ದು ಅವರ ಜಯಂತಿಯನ್ನು ಇಂದು ನಾವು ರಾಷ್ಟ್ರೀಯ ಶಿಕ್ಷಣ ದಿನಾಚರಣೆ ಯಾಗಿ ಆಚರಣೆ ಮಾಡುತ್ತಿದ್ದೇವೆ ಎಂದರು, ದೇಶದ ಮಹಾನ್ ನಾಯಕರ ತ್ಯಾಗ ಬಲಿದಾನದಿಂದ ನಮಗೆ ಇಂದು ಸ್ವತಂತ್ರ ಸಿಕ್ಕಿದೆ ಅದನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾಗಿದೆ ದೇಶ ಕಂಡ ಮಹಾನ್ ನಾಯಕರಿಗೆ ಯಾವುದೇ ಒಂದು ಜಾತಿ ಜನಾಂಗಕ್ಕೆ ಸೀಮಿತಗೊಳಿಸಬಾರದು ಪ್ರತಿಯೊಬ್ಬರು ಅವರನ್ನು ಸ್ಮರಣೆ ಮಾಡಬೇಕು ಅವರು ತೋರಿಸಿದ ಮಾರ್ಗದಲ್ಲಿ ಪರಸ್ಪರ ರಾಷ್ಟ್ರೀಯ ಭಾವೈಕ್ಯತೆ ಬಳಸಿಕೊಂಡು ಜೀವನ ಸಾಗಿಸಿದರೆ ಬದುಕು ಸಾರ್ಥಕವಾಗುತ್ತದೆ ಎಂದು ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಉರ್ದು ಮತ್ತು ಕನ್ನಡ ಪ್ರೌಢಶಾಲಾ ವಿಭಾಗದ ಪ್ರಭಾರಿ ಪ್ರಾಚಾರ್ಯರಾದ ಎಂ ಎ ಖಯ್ಯುಮ್ ಅಭಿಪ್ರಾಯಪಟ್ಟರು,

ಈ ಸಂದರ್ಭದಲ್ಲಿ ಶಾಲೆಯ ಸಹಶಿಕ್ಷಕರುಗಳಾದ ಸುಜಾತಾ ಮುದಗಲ್, ಶಕುಂತಲಾ ದೇವಿ,

ಗುರುರಾಜ್ ಸಿದ್ದಪ್ಪ ಮೇಟಿ ಮತ್ತು ಫರ್ಹತ್ ಜಹಾ ಬೇಗಂ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳ ಪಾಲಕರು ಪಾಲ್ಗೊಂಡಿದ್ದರು.

---

# ಅಂತಾರಾಷ್ಟ್ರೀಯ ದತ್ತು ಮಾಸಾಚರಣೆ 2024: ಮಕ್ಕಳ ಮಾರಾಟ ಶಿಕ್ಷಾರ್ಹ ಅಪರಾಧ

**ವಿಜಯಪುರ :** ಮಕ್ಕಳನ್ನು ಮಾರಾಟ ಮಾಡುವುದು ಶಿಕ್ಷಾರ್ಹ ಅಪರಾಧವಾಗಿದ್ದು, ಮಕ್ಕಳನ್ನು ಮಾರುವ ಹಾಗೂ ಕೊಳ್ಳುವವರಿಗೆ ಬಾಲನ್ಯಾಯ ಕಾಯ್ದೆ-2015 ರ ಸೆಕ್ಷನ್ 80 ಮತ್ತು 81ರನ್ವಯ 05 ವರ್ಷಗಳವರೆಗೂ ಸೆರೆಮನೆ ವಾಸದೊಂದಿಗೆ 01 ಲಕ್ಷ ರೂಗಳ ದಂಡ ವಿಧಿಸಬಹುದಾಗಿದೆ.

ಇಂತಹ ಅಪರಾಧಗಳಲ್ಲಿ ಆಸ್ಪತ್ರೆಯವರು ಶಾಮೀಲಾಗಿದ್ದರೆ ಶಿಕ್ಷೆಯ ಅವಧಿ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ 7 ವರ್ಷಗಳವರೆಗೆ ವಿಸ್ತರಣೆ ಮಾಡಬಹುದಾಗಿದೆ.

2024ರ ನವೆಂಬರ್ ತಿಂಗಳನ್ನು ಅಂತರಾಷ್ಟ್ರೀಯ ದತ್ತು ಮಾಸಾಚರಣೆಯಾಗಿ ಆಚರಿಸಲಾಗುತ್ತಿದೆ. ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿಜಯಪುರ ಇವರ ವತಿಯಿಂದ ಮಕ್ಕಳ ಮಾರಾಟ ಅಪರಾಧದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ.

ಅನಾಥ, ಪರಿತ್ಯಕ್ತ ಮತ್ತು ಒಪ್ಪಿಸಲ್ಪಟ್ಟ ಮಕ್ಕಳ ಮಾಹಿತಿಯು ಕಂಡುಬಂದಲ್ಲಿ ಸಾರ್ವಜನಿಕರು ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿಜಯಪುರ ದೂರವಾಣಿ ಸಂಖ್ಯೆ: 08352295261 ಸಂಪರ್ಕಿಸಿ ಮಾಹಿತಿ ನೀಡಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State